ಸಂಪುಟ: 13 Volume | ಸಂಚಿಕೆ: 291 Issue | ಪುಟಗಳು 08 Pages | ಬುಧವಾರ 07 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಒಂದು ಗ್ರಂಥಾಲಯದ ಎಲ್ಲಾ ತಿಳುವಳಿಕೆಗಳನ್ನು ತಲೆಯಲ್ಲಿರಿಸಿ ಅಹಂಕರಿಸಿ ನಡೆಯುವ ಒಬ್ಬ ವ್ಯಕ್ತಿಗಿಂತ ಒಳ್ಳೆಯ ಸ್ವಭಾವ ಮತ್ತು ನಡವಳಿಕೆಯಿರುವ ಒಬ್ಬ ಸಾಧಾರಣ ವ್ಯಕ್ತಿ ಮೇಲು.

–ಸ್ವಾಮಿ ವಿವೇಕಾನಂದ

ಆಕೆ ತಿಳಿಯುವುದೇ ಕಲಿಕಾ ಹಬ್ಬ: ಜಮಾದರ್ 4

ಮರಣೋತ್ತರ ಪರೀಕ್ಷೆ ಒಂದೇ ಬಾರಿ ನಡೆದಿದ್ದು 6

ಜಾತ್ರೆಗಳಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ 7



ಕಾಂಗ್ರೆಸ್ ಪಕ್ಷದಿಂದ ಆಗ್ನೇಯ ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಆಯ್ಕೆಯಾದ ಹಿನ್ನೆಲೆ ಮಾನ್ಯ ಯೋಜನಾ ಮತ್ತು ಸಾಂಖ್ಯಿಕ ಇಲಾಖೆ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಡಿ ಸುಧಾಕರ್ ಅವರನ್ನು ಬೆಂಗಳೂರಿನ ಅವರ ಗೃಹ ಕಚೇರಿಯಲ್ಲಿ ಭೇಟಿಯಾಗಿ ಪದವೀಧರ ಕ್ಷೇತ್ರದ ಚುನಾವಣೆ ಗೆಲುವಿನ ಕುರಿತು ಸಲಹೆ ಮತ್ತು ಮಾರ್ಗದರ್ಶನ ಪಡೆದುಕೊಂಡೆನು. ಈ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರರಾದ ಸೂರ್ಯ ಮುಕುಂದರಾಜ್ ಜೊತೆಗಿದ್ದರು.

## ಹುಸಿ ಬಾಂಬ್ ಬೆದರಿಕೆ, ಕಲಾಪ ಸ್ಥಗಿತ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನವನಗರದ ಜಿಲ್ಲಾ ನ್ಯಾಯಾಲಯ ಸ್ಫೋಟಿಸುವುದಾಗಿ ಜಿಲ್ಲಾ ನ್ಯಾಯಾಧೀಶರಿಗೆ ಇಮೇಲ್ ಮೂಲಕ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಕಲಾಪಗಳನ್ನು ಸ್ಥಗಿತಗೊಳಿಸಲಾಯಿತು.



ಮಂಗಳವಾರ ಬೆಳಗ್ಗೆ ಜಿಲ್ಲಾ ನ್ಯಾಯಾಧೀಶರ ಅಧಿಕೃತ ಈಮೇಲ್‌ಗೆ ಬೆದರಿಕೆಯ ಸಂದೇಶ ಬಂದಿದ್ದು, ನ್ಯಾಯಾಲಯ ಆವರಣದ ಸೂಕ್ಷ್ಮ ಸ್ಥಳದಲ್ಲಿ ಬಾಂಬ್ ಇರಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಮಧ್ಯಾಹ್ನ ಊಟದ ಸಮಯದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಒಡ್ಡಿದ ಹಿನ್ನಲೆ ಆತಂಕ ಸೃಷ್ಟಿಯಾಗಿ, ನ್ಯಾಯಾಧೀಶರು ಒಳಗಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿದರು. ಬಳಿಕ ಬಾಗಲಕೋಟೆ ಡಿವೈಎಸ್ಪಿ ಗಜಾನನ ಸುತಾರ ನೇತೃತ್ವದಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ಸಿಬ್ಬಂದಿ ನ್ಯಾಯಾಲಯಕ್ಕೆ ಆಗಮಿಸಿ ತಪಾಸಣೆ ನಡೆಸಿದರು. ಬೆದರಿಕೆ ಮೇಲ್ ಕಳುಹಿಸಿದ ವ್ಯಕ್ತಿ ಇಲ್ಲವೇ ಸಂಘಟನೆ ಪತ್ತೆಗೆ ಸೈಬರ್ ಕ್ರೈಮ್ ವಿಭಾಗದ ಸಹಾಯ ಪಡೆದು ತನಿಖೆ ಕೈಗೊಳ್ಳಲಾಗಿದೆ. ಘಟನೆ ಸಾರ್ವಜನಿಕ ವಲಯದಲ್ಲಿ ತೀವ್ರ ಆತಂಕ ಮೂಡಿಸಿದೆ.



ಹುಮನಾಬಾದ್, ಮಲ್ಲಮ್ಮ ನುಡಿ ಕನ್ನಡ ದಿನ ಪತ್ರಿಕೆಯ ಕ್ಯಾಲೆಂಡರ್ ಗಳನ್ನು ಮಾಜಿ ಸಚಿವ ರಾಜಶೇಖರ ಪಾಟೀಲ ಮಂಗಳವಾರ ಬಿಡುಗಡೆ ಗೊಳಿಸಿದರು. ಈ ಸಂದರ್ಭದಲ್ಲಿ ಮಾಜಿ ಜಿಪಂ ಸದಸ್ಯ ವೀರಣ್ಣ ಪಾಟೀಲ ಉಪಸ್ಥಿತರಿದ್ದರು.



ಹುಮನಾಬಾದ್: ಇಲ್ಲಿನ ಪ್ರಸಿದ್ಧ ದೇವಸ್ಥಾನವಾದ ಶ್ರೀ ಮಾಣಿಕ ಪ್ರಭು ದೇವಸ್ಥಾನದ ಪೀಠಾಧಿಪತಿಗಳಾದ ಡಾ.ಜ್ಞಾನರಾಜ ಪ್ರಭುಗಳು ಪತ್ರಿಕೆಯ ಕ್ಯಾಲೆಂಡರ್ ಬಿಡುಗಡೆ ಗೊಳಿಸಿ. ಪತ್ರಿಕೆಯನ್ನು ಒದುತ್ತಿರುವುದು ಕಾಣಬಹುದು.



ಸಿಂಧನೂರು ವೀರೇಶರವರು ಮಲ್ಲಮ್ಮ ನುಡಿ ಕ್ಯಾಲೆಂಡರ್ ಪ್ರಮುಖರ ಸಮ್ಮುಖದಲ್ಲಿ ಅನಾವರಣ ಮಾಡಿದ್ದಾರೆ, ಅಭಿನಂದನೆಗಳು ತಮ್ಮ ಕ್ರೀಯಾಶೀಲತೆಗೆ.

# ಸಾಟಿಇಲ್ಲದ ದಾಖಲೆಯ ಮೇಟಿ

## ದಾಖಲೆ ಮುರಿಯಲು ರಾಜಕೀಯ ಮಾಡಿಲ್ಲ | ಅಸಮಾನತೆ ತೊಲಗುವವರೆಗೆ ಹೋರಾಟ: ಸಿಎಂ

• ಮಲ್ಲಮ್ಮ ನುಡಿ ವಾರ್ತೆ ಮೈಸೂರು

ಸಮಾಜದಲ್ಲಿ ಅಸಮಾನತೆ ಇನ್ನೂ ಜೀವಂತವಾಗಿದ್ದು, ಅಸಮಾನತೆ ಹೋಗುವವರೆಗೂ, ಎಲ್ಲರಿಗೂ ನ್ಯಾಯ ಸಿಗುವವರೆಗೂ ಹೋರಾಟ ಹಾಗೂ ಜನರ ಕೆಲಸ ಮಾಡುವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನ ತಮ್ಮ ನಿವಾಸದಲ್ಲಿ ಮಾಧ್ಯಮ ದವರ ಜೊತೆ ಮಾತನಾಡಿ, ಮಾಜಿ ಮುಖ್ಯಮಂತ್ರಿ ದೇವರಾಜ್ ಅರಸು ಅವರ ದಾಖಲೆಯನ್ನು ಸರಿಗಟ್ಟಿರುವ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿ, ದಾಖಲೆಗಳನ್ನು ಮುರಿಯಲೆಂದು ರಾಜಕೀಯ ಮಾಡಿಲ್ಲ ಎಂದಿದ್ದಾರೆ.

**ಜನರ ಆಶೀರ್ವಾದ:** ಕಾಕತಾಳೀಯವಾಗಿ ಆಗಿದೆ. ದೇವರಾಜ ಅರಸು ಅವರು ಎಷ್ಟು ವರ್ಷ ಆಡಳಿತ ಮಾಡಿದ್ದಾರೆಂದು ತಿಳಿದಿರಲಿಲ್ಲ. ಜನರ ಆಶೀರ್ವಾದದಿಂದ ದೇವರಾಜ ಅರಸು ಅವರ ದಾಖಲೆಯನ್ನು ಮುರಿಯಲು ಸಾಧ್ಯವಾಗಿದೆ. ಮುಖ್ಯಮಂತ್ರಿಯಾಗಿ ಅವಧಿ ಪೂರ್ಣಗೊಳಿಸುವ ವಿಶ್ವಾಸವಿದೆ ಎಂದು ಹೇಳಿದ್ದಾರೆ.



ಡಿ.ದೇವರಾಜ ಅರಸರು ಅವರು ಮುಖ್ಯಮಂತ್ರಿಗಳಾಗಿ ಏಳು ವರ್ಷ ಏಳು ತಿಂಗಳು ಇಪ್ಪತ್ತಮೂರು ದಿನಗಳ ಕಾಲ ಈ ರಾಜ್ಯದ ಜನರ ಸೇವೆ ಮಾಡಿದ್ದಾರೆ. ಅದಕ್ಕಿಂತಲೂ ಹೆಚ್ಚಿನ ಅವಧಿಗೆ ಸಿಎಂ ಆಗಿ ಸೇವೆ ಸಲ್ಲಿಸುವ ಅವಕಾಶವನ್ನು ರಾಜ್ಯದ ಜನತೆ ನನಗೆ ನೀಡಿದ್ದಾರೆ. ಇದನ್ನೆಲ್ಲ ದಾಖಲೆಗಳ ದೃಷ್ಟಿಯಿಂದ ನಾನು ನೋಡಲ್ಲ. ಯಾರೂ ನೋಡಬಾರದು ಕೂಡಾ. ಇದು ಜನರ ಸೇವೆಗೆ ಸಿಕ್ಕಿರುವ ಅವಕಾಶದ ಭಾಗ್ಯ

–ಸಿದ್ದರಾಮಯ್ಯ, ಮುಖ್ಯಮಂತ್ರಿ

### ತೃಪ್ತಿ ತಂದ ರಾಜ್ಯ ರಾಜಕಾರಣ

ಇಷ್ಟು ವರ್ಷಗಳ ರಾಜಕಾರಣ ತೃಪ್ತಿ ತಂದಿದೆ ಎಂದ ಮುಖ್ಯಮಂತ್ರಿಗಳು ಜನರ ಕೆಲಸ ಮಾಡುವುದು ಖುಷಿಯ ಸಂಗತಿ. ರಾಜಕಾರಣ ಎಂದರೆ ಬಡವರು, ದಲಿತರು, ಹಿಂದುಳಿದವರ ಕೆಲಸ ಕೆಲಸ ಮಾಡಿಕೊಡುವುದು. ಹೆಚ್ಚೆಂದರೆ ಶಾಸಕನಾಗಬೇಕೆಂದು ಅಂದುಕೊಂಡಿದ್ದೆ. ಶಾಸಕನಾದೆ, ಮಂತ್ರಿ, ಉಪಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಹಾಗೂ ಸಿಎಂ ಆದೆ. ಅವಕಾಶಗಳು ಸಿಕ್ಕಿದ್ದರಿಂದ ಇವೆಲ್ಲ ಆಗಲು ಸಾಧ್ಯವಾಯಿತು ಎಂದಿದ್ದಾರೆ.

### ಬಜೆಟ್‌ನಲ್ಲಿ ವಿಶೇಷ ಘೋಷಣೆ: ಕಾದು ನೋಡಿ

ದೇವರಾಜ ಅರಸು, ನಾನು ಇಬ್ಬರೂ ಮೈಸೂರಿನವರೇ. ಇಬ್ಬರೂ ದೀರ್ಘಾವಧಿಯ ಸಿಎಂಗಳಾಗಿದ್ದು ಕಾಲಘಟ್ಟ ಬೇರೆ ಬೇರೆ. 1972ರಿಂದ 80ವರೆಗೆ ಸಿಎಂ ಆಗಿದ್ದರು. ನಾನು ಎರಡು ಅವಧಿಗೆ ಆಗಿದ್ದೇನೆ. ಈ ಬಾರಿಯ ಬಜೆಟ್‌ನಲ್ಲಿ ವಿಶೇಷತೆ ಇದೆ. ಬಜೆಟ್ ಮಂಡಿಸುವವರೆಗೂ ಕಾದು ನೋಡಿ ಎಂದು ವಿವರಿಸಿದ್ದಾರೆ.

### ಬಳ್ಳಾರಿ ಘಟನೆ ಬಗ್ಗೆ ಗೃಹ ಸಚಿವರೊಂದಿಗೆ ಚರ್ಚೆ

ಬಳ್ಳಾರಿ ಘಟನೆಯ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ ಈ ಬಗ್ಗೆ ಗೃಹ ಸಚಿವರೊಂದಿಗೆ ಮಾತನಾಡುತ್ತೇನೆ. ತನಿಖೆ ನಡೆಯುತ್ತಿದ್ದು, ಕೆಲವರನ್ನು ಬಂಧಿಸಲಾಗಿದೆ. ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಘಟನೆ ಕುರಿತು ಮಾಡಿರುವ ಆರೋಪ ಬಗ್ಗೆ ಪ್ರತಿಕ್ರಿಯೆ ನೀಡಿ, ಜೆಡಿಎಸ್, ಬಿಜೆಪಿ ಕಾನೂನಿನ ರೀತಿ ಮಾತನಾಡದೆ ರಾಜಕೀಯ ಮಾಡ್ತಾರೆ ಎಂದಿದ್ದಾರೆ.

### ಅರಸು–ನನ್ನ ನಡುವೆ ಸೈದ್ಧಾಂತಿಕ ಸಹಮತ

ನನ್ನ ರಾಜಕೀಯ ಜೀವನಕ್ಕೆ ಹಲವು ಹಿರಿಯರ ಚಿಂತನೆ ಮತ್ತು ಸಾಧನೆಗಳು ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿವೆ. ಆ ಹಿರಿಯರ ಸಾಲಿನಲ್ಲಿ ದೇವರಾಜ ಅರಸು ಪ್ರಮುಖರು. ನಮ್ಮಿಬ್ಬರ ನಡುವಿನ ಸೈದ್ಧಾಂತಿಕ ಸಹಮತ ಮತ್ತು ನಾನು ಕೂಡಾ ಅವರಂತೆ ಮೈಸೂರಿನ ಮಣ್ಣಿನ ಮಗ ಎನ್ನುವ ಕಾರಣಕ್ಕೆ ನನ್ನ ಹೃದಯದಲ್ಲಿ ಅವರಿಗೆ ವಿಶೇಷವಾದ ಸ್ಥಾನ ಇದೆ.

### ನಾಡಿನಲ್ಲಿ ಸಾಮಾಜಿಕ ನ್ಯಾಯದ ಪರಂಪರೆ

ಸಾಮಾಜಿಕ ನ್ಯಾಯದ ಬಂಡಿಯ ಪಯಣಕ್ಕೆ ಕರ್ನಾಟಕದಲ್ಲಿ ದೀರ್ಘ ಪರಂಪರೆ ಇದೆ. ಬಸವಣ್ಣನವರಿಂದ ಪ್ರಾರಂಭಗೊಂಡು ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಡಿ.ದೇವರಾಜ ಅರಸು ವರೆಗೆ ಹಲವಾರು ಮಹನೀಯರು ಈ ಬಂಡಿಯನ್ನು ಎಳೆದುಕೊಂಡು ಬಂದಿದ್ದಾರೆ. ಇದನ್ನು ಇನ್ನಷ್ಟು ಮುಂದಕ್ಕೆ ಎಳೆದುಕೊಂಡು ಹೋಗುವ ಅವಕಾಶ ನನಗೆ ಸಿಕ್ಕಿದೆ.

## ಕುಮಾರ್‌ಗೆ ಗುರುರಕ್ಷೆ ಪ್ರಶಸ್ತಿ



ಪೀಣ್ಯ ದಾಸರಹಳ್ಳಿ: ಕುಣಿಗಲ್ ತಾಲೂಕಿನ ಉತ್ರಿದುರ್ಗ ಹೋಬಳಿ ಶ್ರೀ ಉರಿಗದ್ದಿಗೇಶ್ವರ ಕ್ಷೇತ್ರದ ಶ್ರೀ ಬೆಟ್ಟಳ್ಳಿ ಮಠದ ವತಿಯಿಂದ ಬೆಟ್ಟಳ್ಳಿ ಮಠದ ಮಠಾಧ್ಯಕ್ಷರಾದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಮಠದ ಹಳೆ ವಿದ್ಯಾರ್ಥಿಗಳ ಮತ್ತು ಹಿತೈಷಿಗಳ ವಾರ್ಷಿಕ ಸಮಾವೇಶದಲ್ಲಿ ಕೈಗಾರಿಕೋದ್ಯಮಿಗಳು ಹಾಗೂ ಹೆಗ್ಗನಹಳ್ಳಿ ವಾರ್ಡ್ ಮಾಜಿ ಜೆಡಿಎಸ್ ಅಧ್ಯಕ್ಷರು ಹಾಗೂ ಸಮಾಜ ಸೇವಕರಾದ ಆರ್ ಕುಮಾರ್ ರವರ ಸಮಾಜ ಸೇವೆಯನ್ನು ಗುರುತಿಸಿ "ಗುರುರಕ್ಷೆ" ಪ್ರಶಸ್ತಿಯನ್ನು ಮಠದ ಸ್ವಾಮೀಜಿ ಮತ್ತು ರಾಜಕೀಯ ಮುಖಂಡರ ಸಮ್ಮುಖದಲ್ಲಿ ಪ್ರಧಾನ ಸನ್ಮಾನಿಸಿ ಗೌರವಿಸಲಾಯಿತು.

## ಬ್ರೈನ್ ಮ್ಯಾಪಿಂಗ್‌ಗೆ ಮಾಡಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಳ್ಳಾರಿ ಯುವಕನ ಮೃತದೇಹವನ್ನು ಎರಡು ಬಾರಿ ಪೋಸ್ಟ್ ಮಾರ್ಟಂ ಮಾಡಿರುವ ಬಗ್ಗೆ ಅಲ್ಲಿನ ಬಿಮ್ಸ್ ಅಧಿಕ್ಷಕರನ್ನು ತಕ್ಷಣವೇ ಬ್ರೈನ್ ಮ್ಯಾಪಿಂಗ್‌ಗೆ ಒಳಪಡಿಸಿ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.



ಈ ಬಗ್ಗೆ ಮಾತನಾಡಿ, ಬಳ್ಳಾರಿಯಲ್ಲಿ ಗನ್‌ಮ್ಯಾನ್ ಹಾರಿಸಿದ ಗುಂಡಿಗೆ ಬಲಿಯಾದ ಯುವಕನ ಮೃತದೇಹವನ್ನು ಎರಡು ಬಾರಿ ಪೋಸ್ಟ್ ಮಾರ್ಟಂ ಮಾಡಲಾಗಿದೆ ಎಂಬ ತಮ್ಮ ಆರೋಪವನ್ನು ಪುನರುಚ್ಚರಿಸಿದ್ದಾರೆ. ತಮ್ಮ ಹೇಳಿಕೆಯ ಬಗ್ಗೆ ಗೃಹ ಸಚಿವ ಪರಮೇಶ್ವರ ಅವರು ನೀಡಿದ್ದ ಪ್ರತಿಕ್ರಿಯೆ ಬಗ್ಗೆ ಖಾರವಾಗಿ ತಿರುಗೇಟು ನೀಡಿರುವ ಕೇಂದ್ರ ಸಚಿವರು; ಬಳ್ಳಾರಿಯಲ್ಲಿ ಕಗ್ಗೊಲೆಯಾದ ನಿಮ್ಮದೇ ಪಕ್ಷದ ನತದೃಷ್ಟ ಕಾರ್ಯಕರ್ತನ ಡಬಲ್ ಪೋಸ್ಟ್ ಮಾರ್ಟಂ ಬಗ್ಗೆ ನಾನು ಹೇಳಿದ್ದು ಅಕ್ಷರಶಃ ನಿಜ ಎಂದಿದ್ದಾರೆ.

## ಹೆದರಿಕೆ ಬೆದರಿಕೆಗೆ ಜಗ್ಗಲ್ಲ: ಎಂಎಲ್‌ಸಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಎಷ್ಟೇ ಹಾರಾಟ ಚೀರಾಟ ಮಾಡಿದರು ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುವುದಿಲ್ಲ. ಸಚಿವ, ಶಾಸಕ ತಮ್ಮ ಹಿಂಬಾಲಕರಿಂದ ಗೊಂದಲ ಮೂಡಿಸಿದ್ದು ಇದಕ್ಕೆಲ್ಲ ಜಗ್ಗದೆ ಅಭಿವೃದ್ಧಿ ಕಾರ್ಯಗಳು ಜರುಗುತ್ತವೆ ಎಂದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ತಿಳಿಸಿದ್ದಾರೆ.

ನಗರದಲ್ಲಿರುವ ಭಾರತೀಯ ಜನತಾ ಪಕ್ಷದ ಜಿಲ್ಲಾ ಕಾರ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಹೇಮಲತಾ ನಾಯಕ



ಮಾತನಾಡಿ, ತಾಲೂಕಿನ ಹಿಟ್ನಾಳ ಗ್ರಾಮದಲ್ಲಿ ರೈಲ್ವೆ ಮೇಲ್ ಸೇತುವೆ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಸೇರಿದಂತೆ ಶಾಸಕ ಸಂಸದರು ಇಲ್ಲ ಸಲ್ಲದ ನೆಪವಡ್ಡಿ ಕಾರ್ಯಕ್ರಮ ಅಡ್ಡಿಪಡಿಸಲು ಪ್ರಯತ್ನಿಸಿದ್ದು ಇದರಿಂದ ಯಾವುದೇ ಅಭಿವೃದ್ಧಿ ಕಾರ್ಯ ನಿಲ್ಲುವುದಿಲ್ಲ ಎಂದು ಹೇಳಿದ್ದಾರೆ.

## ಸ್ತ್ರೀ ಆರ್ಥಿಕ ದೃಢತೆಗೆ ಯೋಜನೆ ಸಹಕಾರಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮಹಿಳೆಯರ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಹಾಗೂ ಸ್ವಂತ ಬಲದ ಮೇಲೆ ಜೀವನ ಸಾಗಿಸಲು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಹಕಾರಿಯಾಗಿದೆ.

ಸುಭಾಷ್ ಚೌಕ್ ಹತ್ತಿರ ಮಹಿಳೆಯರಿಗೆ ಒಂದು ತಿಂಗಳ ಅವಧಿಗೆ ಏರ್ಪಡಿಸಿದ್ದ ಕೌಲ ಅಭಿವೃದ್ಧಿ ತರಬೇತಿ ಶಿಬಿರಕ್ಕೆ ಹಿರಿಯ ಪತ್ರಕರ್ತ ಗಣಪತಿ ಬೋಚರೆ ಚಾಲನೆ ಜ್ಯೋತಿ ಬೆಳಗಿಸುವುದರ ಮೂಲಕ ನೀಡಿದ್ದಾರೆ. ಪಟ್ಟಣದ ಬಾಲಾಜಿ ಮಂದಿರದಲ್ಲಿ ಹಮ್ಮಿಕೊಳ್ಳಲಾದ ಕೌಶಲ ಅಭಿವೃದ್ಧಿ ತರಬೇತಿಯ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಧರ್ಮಸ್ಥಳದ ಗ್ರಾಮ ಅಭಿವೃದ್ಧಿ ಯೋಜನೆ ಬಿಸಿಟ್ರಸ್ಟ್‌ನವರು ಈ ಭಾಗದಲ್ಲಿ ಮಹಿಳೆಯರಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುವುದರಿಂದ ಅನೇಕ ಕುಟುಂಬಗಳ ಸ್ವಾವಲಂಬಿ ಜೀವನಕ್ಕೆ ಸಹಕಾರಿ ಎಂದಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಸಂತೋಷ್ ನಾಯಕ್ ಮಾತನಾಡಿ, ನಮ್ಮ ಸಂಸ್ಥೆಯು ಮಹಿಳೆಯರಿಗಾಗಿ ಬಹು ಉಪಯೋಗಿ, ಹಲವಾರು ಯೋಜನೆಗಳ ಮುಖಾಂತರ ಮಹಿಳೆಯರಿಗೆ ಆಸರೆಯಾಗಿದೆ. ಜನಸಾಮಾನ್ಯರ ಜೀವನಮಟ್ಟ ಸುಧಾರಿಸಿಕೊಳ್ಳಲು ಪೂರಕವಾಗಿದೆ ಎಂದು ತಿಳಿಸಿದ್ದಾರೆ.

ಜನ ಜಾಗೃತಿ ವೇದಿಕೆಯ ಮಾಧ್ಯಮ ಸಲಹೆಗಾರ ಸಂತೋಷ್ ಬಿಜಿ ಪಾಟೀಲ್ ಧರ್ಮಸ್ಥಳ ಸಂಸ್ಥೆಯ ಕಾರ್ಯವೈಖರಿ ಕುರಿತು



ಮಹಿಳೆಯರಿಗೆ ಸ್ವಾವಲಂಬಿ ಜೀವನಕ್ಕೆ ಕೌಶಲ ಅಭಿವೃದ್ಧಿ ತರಬೇತಿಗಳು ಅತ್ಯಂತ ಅವಶ್ಯಕ. ಜನಸಾಮಾನ್ಯರ ಜೀವನಮಟ್ಟ ಸುಧಾರಣೆಯ ಜೊತೆಗೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿ.

–ಶೃತಿ ಸಂತೋಷ್ ಬಿ.ಜಿ ಪಾಟೀಲ್

ಕೌಶಲ ಅಭಿವೃದ್ಧಿ ತರಬೇತಿದಾರರು ಭಾಲ್ಕಿ

ಮಾತನಾಡಿ ಡಾ. ವೀರೇಂದ್ರ ಹೆಗಡೆಯವರು ಹಾಗೂ ಮಾತೋಶ್ರೀ ಹೇಮಾವತಿ ತಾಯಿಯವರು ಬಡ ಕುಟುಂಬಗಳಿಗೆ ಒಂದು ಬ್ಯಾಂಕಿನ ಮುಖಾಂತರ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ಕೊಡಿಸಲು ಸಹಕಾರಿಯಾಗಿರುತ್ತಾರೆ. ಎಲ್ಲಾ ಮಹಿಳೆಯರು ಈ ಸಂಘವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗಬೇಕು ಎಂದಿದ್ದಾರೆ. ಛಾಯಾ ವಿಜಯಕುಮಾರ್ ರಾಜಭವನ್, ಕೌಶಲ ಅಭಿವೃದ್ಧಿ ತರಬೇತಿದಾರರಾದ ಶೃತಿ ಸಂತೋಷ್ ಬಿಜಿ ಪಾಟೀಲ್, ಸಂಸ್ಥೆಯ ಮೇಲ್ವಿಚಾರಕ ಶಿವಾನಂದ ಲಕಾಟಿ ಸುರೇಖಾ ಕನಶೆಟ್ಟಿ ಹಾಜರಿದ್ದರು.

## ಶಾಸಕರಿಗೇ ಬಸನಗೌಡ ಸವಾಲ್

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು, ಕಾಂಗ್ರೆಸ್ ಪಕ್ಷದ ಹೆಸರಿನಿಂದ ತಾವು ಗೆದ್ದ ವಿರೋಧ ಪಕ್ಷ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ದ್ರೋಹ.. ಮಾಡಿದ್ದು. ಮತ್ತು ಎಸಿ ಎಸ್ಟಿ ಸಮುದಾಯಗಳ ಬೋರ್ ವೆಲ್ ಮಂಜೂರು ಮಾಡಿಸಿದ್ದು. ಅವುಗಳನ್ನು ರದ್ದು ಮಾಡಿ ಎಂದು ಲೇಟರ್ ಕೊಟ್ಟಿದ್ದು. ಯಾರಿಗೂ ಗೊತ್ತಿಲ್ಲಂದುಕೊಂಡರೇನು ಎಂದು ಶಾಸಕ ಹಂಪನಗೌಡ ಬಾದರ್ಲಿ ವಿರುದ್ಧ ಕಿಡಿಕಾರಿದ್ದಾರೆ.

**ಶಾಸಕರಿಗೆ ಸವಾಲ್:** ಕಾಂಗ್ರೆಸ್ ಪಕ್ಷದ ಹೆಸರು ಮೂಲಕ ಗೆದ್ದಿರುವುದು ತಾವು. ಇಲ್ಲಾಂದ್ರೆ ಠೇವಣಿ ಕಳೆದುಕೊಳ್ಳುತ್ತೀರಿ. ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಚುನಾವಣೆಯಲ್ಲಿ ನಿಲ್ಲಿ ನೋಡೋಣ ನಿಮ್ಮ ಶಕ್ತಿ ಎಂಥದು ಎಂಬುದು ಗೊತ್ತಾಗುತ್ತದೆ ನಿಮ್ಮ ಬಂಡವಾಳ ಹೂಡಿಕೆ ಏನು ಎಂಥಾ ಠೇವಣಿ ಕಳೆದುಕೊಂಡು ಮನೆಗೆ ಹೋಗುತ್ತಾರೆ. ವಿಧಾನ ಪರಿಷತ್ ಸದಸ್ಯನ್ನಾಗಿ ತಾಲೂಕು ಅಭಿವೃದ್ಧಿ ಗೆ ನಾನೇನು ಕೆಲಸ ಮಾಡಿದ್ದೇನೆ ನೀವು ಏನು ಮಾಡಿದ್ದೀರಿ ಎಂದು ಪ್ರಶ್ನಿಸಿದ್ದಾರೆ.

ಸಾರ್ವಜನಿಕರಿಗೆ ತೋರಿಸಿ ತಾಲೂಕು ಅಭಿವೃದ್ಧಿಗೆ ನಿಮ್ಮ ಕೊಡಿಗೇನು ಬನ್ನಿ ಬಹಿರಂಗ ಚರ್ಚೆಗೆ ಎಂದು ಶಾಸಕ ಬಾದರ್ಲಿಗೆ ಬಸನಗೌಡ ಬಾದರ್ಲಿ ಸವಾಲು ಹಾಕಿದ್ದಾರೆ.

**ದರ್ಪದಿಂದ ಭಯ ಭೀತಿ:** ಐದು ಬಾರಿ ಶಾಸಕರಾಗಿ ಸಣ್ಣತನ

### ಶಾಸಕರೇ ನಿಮ್ಮ ನೆಯಿಂದ ಬಸ್ ಖರೀದಿಸಿದ್ರಿ

ವಿದ್ಯಾರ್ಥಿಗಳ ಅನುಕೂಲಕ್ಕೆ ಬಸ್ ಸೌಕರ್ಯ ವ್ಯವಸ್ಥೆ ಇಲ್ಲದಾಗಿದೆ. ಈ ಬಗ್ಗೆ ಅಧಿವೇಶನದಲ್ಲಿ ಧ್ವನಿ ಎತ್ತಿ ಮಾತನಾಡಿದ್ದಕ್ಕೆ ಸರ್ಕಾರ ಸ್ಪಂದಿಸಿದೆ. ಕೆ.ಕೆ ಆರ್‌ಡಿಬಿಯೋಜನೆಅಡಿ 14 ಬಸ್ ಖರೀದಿ ಮಾಡಿ ಅಂಬಾ ಜಾತ್ರೆಯಲ್ಲಿ ಸಚಿವರಿಂದ ಚಾಲನೆ ನೀಡಲಾಗಿತ್ತು. ಮತ್ತೆ ಚಾಲನೆ ನೀಡುವುದಕ್ಕೆ ಅಗತ್ಯ ಏನಿತ್ತು? ಶಾಸಕರೇ, ಏನು ನಿಮ್ಮ ಮನೆಯಿಂದ 14 ಬಸ್ ಗಳು ಖರೀದಿ ಮಾಡಿದ್ರೇನು..? ಎಂದು ಶಾಸಕ ಹಂಪನಗೌಡ ಬಾದರ್ಲಿ ವಿರುದ್ಧ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಗುಡುಗಿದ್ದಾರೆ.



ಕೊಂಕು ರಾಜಕೀಯ ಮಾಡಬೇಡಿ. ನನ್ನನ್ನು ಕಾಂಗ್ರೆಸ್ ಪಕ್ಷ ಗುರುತಿಸಿ ವಿಧಾನ ಪರಿಷತ್ ಸದಸ್ಯನಾಗಿ ಮಾಡಿದ್ದಾರೆ. ನಾನು ಒಬ್ಬ ರೈತನ ಮಗ ರೈತರ ಮಗ ಬೆಳೆದಿದ್ದಕ್ಕೆ ನಿಮಗೆ ಹೊಟ್ಟೆ ಉರಿಯನ್ನು ಯಾಕೆ ಜನ ಸಾಮಾನ್ಯರ ಪಕ್ಷದ ಕಾರ್ಯಕರ್ತರು ಬೆಳೆಯಬಾರದು ಎಂದಿದ್ದಾರೆ. ಆರ್‌ಡಿಸಿ ಬ್ಯಾಂಕ್ ನಿರ್ದೇಶಕರು ಸೋಮನಗೌಡ ಬಾದರ್ಲಿ ಶಿವಕುಮಾರ್ ಜವಳಿ, ವೀರು ರಾಜು ಬೂದಿವಾಳ ಕ್ಯಾಂಪ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ವಿಕಲಚೇತನರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಸರ್ಕಾರ ಉತ್ತಮ ಶಿಕ್ಷಣ, ಉದ್ಯೋಗ ಕಲ್ಪಿಸುದೆ: ಸಚಿವ ಈಶ್ವರ ಖಂಡ್ರೆ

# 7 ಕೆರೆ ಜಾಗ ಒತ್ತುವರಿ ತೆರವುಗೊಳಿಸಿ, ಜಮೀನು ಜಪ್ತಿ ಮಾಡಿ: ನ್ಯಾ. ಬಿ.ಎಸ್.ಪಾಟೀಲ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಮಹಾನಗರದಲ್ಲಿ ನಿಜಾಮರ ಕಾಲದಿಂದ ಇರುವ 7 ಕೆರೆಗಳಲ್ಲಿ ಆಗಿರುವ ಒತ್ತುವರಿಯನ್ನು ತೆರವುಗೊಳಿಸಿ ಜಮೀನನ್ನು ಮರಳಿ ಸರ್ಕಾರದ ಸ್ವಾಧೀನಕ್ಕೆ ಪಡೆಯಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತಿಳಿಸಿದರು.

ಸೋಮವಾರ ಇಲ್ಲಿನ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಂತರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಲಬುರಗಿ ನಗರದಲ್ಲಿನ ಕೆರೆ ಒತ್ತುವರಿ ಸಂಬಂಧ ಲೋಕಾಯುಕ್ತದಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದಿಲ್ಲಿ ವಿಚಾರಣೆ ನಡೆಸಿದ್ದು, ನಿಜಾಮ ಸರ್ಕಾರದಿಂದಲೆ ಜಮೀನು ಹಂಚಿಕೆಯಾಗಿದೆ ಎಂದು ಹೇಳಲಾಗುತ್ತಿದೆಯಾದರು ಅಧಿಕಾರಿಗಳ ಬಳಿ ಅಧಿಕೃತ ದಾಖಲೆ ಇಲ್ಲ. ಕಂದಾಯ ದಾಖಲೆಯಲ್ಲಿ ಅದು ಸರ್ಕಾರಿ ಜಮೀನಾಗಿದೆ. ಹೀಗಾಗಿ ಒತ್ತುವರಿ ತೆರವುಗೊಳಿಸುವಂತೆ ಜಿಲ್ಲಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತರು ಹಾಗೂ ತಹಶೀಲ್ದಾರರಿಗೆ ಸೂಚನೆ ನೀಡಲಾಗಿದೆ ಎಂದ ಅವರು, ಒತ್ತುವರಿಯಾದ ಜಾಗದಲ್ಲಿ ಪ್ರಸ್ತುತ ಇರುವ ಜನವಸತಿ ಬಗ್ಗೆಯೂ ಮಾಹಿತಿ ನೀಡುವಂತೆ ತಿಳಿಸಲಾಗಿದೆ ಎಂದರು.

ಹಿಂದೆ 3–4 ವರ್ಷದ ಹಿಂದೆ ಕಲಬುರಗಿಗೆ ಬಂದು ಹೋಗಿದ್ದೆ. ಇದೀಗ ನೋಡಿದರೂ ಇಲ್ಲಿ ಇನ್ನು ಕಸದ ಸಮಸ್ಯೆ ಇದೆ. ಕಸ ಸಂಗ್ರಹಣೆ ಸರಿಯಾಗಿ ನಡೆಯುತ್ತಿಲ್ಲ. ಬೀದಿ ನಾಯಿಗಳ ಹಾವಳಿ ಹೆಚ್ಚಿದೆ. ಸ್ವಚ್ಛತೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಅಧಿಕಾರಿ ವರ್ಗ ಮಾಡಬೇಕು. ಜನ ಸಹ ತಮ್ಮ ನಗರ ಸ್ವಚ್ಛವಾಗಿರಿಸಲು ಜಾಗೃತರಾಗುವ ಅವಶ್ಯಕತೆ ಇದೆ ಎಂದು ನ್ಯಾ.ಬಿ.ಎಸ್.ಪಾಟೀಲ ಒತ್ತಿ ಹೇಳಿದರು.

ಕಲಬುರಗಿ ಜಿಲ್ಲೆಯಾದ್ಯಂತ ಕಳೆದ ನಾಲ್ಕು ದಿನಗಳಿಂದ ಲೋಕಾಯುಕ್ತ ಸಂಸ್ಥೆಯ 8 ತಂಡಗಳು ಜೇವರ್ಗಿ, ಆಳಂದ, ಕಲಬುರಗಿ ತಹಶೀಲ್ದಾರ ಮತ್ತು ಉಪ ನೋಂದಣಾಧಿಕಾರಿಗಳ ಕಚೇರಿ, ಬಿ.ಇ.ಓ ಕಚೇರಿ, ಅಗ್ನಿಶಾಮಕ ಠಾಣೆ, ತಾಲೂಕ ಪಂಚಾಯತ್ ಕಚೇರಿ, ಡಿ.ಸಿ. ಕಚೇರಿ, ಆರ್.ಟಿ.ಓ. ಚೆಕ್ ಪೋಸ್ಟ್ ಹೀಗೆ ಇಬ್ಬರು ನ್ಯಾಯಾಂಗ ಅಧಿಕಾರಿಗಳು ಸೇರಿದಂತೆ ಲೋಕಾಯುಕ್ತ ಎಸ್.ಪಿ., ಡಿ.ವೈ.ಎಸ್.ಪಿ, ಪಿ.ಐ ಸೇರಿದಂತೆ ಸಿಬ್ಬಂದಿ ವರ್ಗ ತಪಾಸಣೆ ಮಾಡಿ ಅನೇಕ ನ್ಯೂನತೆಗಳು, ಅಕ್ರಮಗಳ ಕುರಿತು ಪತ್ತೆ ಹಚ್ಚಲಾಗಿದೆ. ಇನ್ನು ತಪಾಸಣೆ ವೇಳೆಯಲ್ಲಿ ಬೀದರ ಜಿಲ್ಲೆಯ ಹುಮನಾಬಾದನಲಿಲ ಏಜೆಂಟರ ಮೂಲಕ ಹಣ ವಸೂಲಿ ಮಾಡಲಾಗುತ್ತಿದೆ. ಆಳಂದ ಚೆಕ್ ಪೋಸ್ಟ್‌ನಲ್ಲಿ ಅಕ್ರಮವಾಗಿ ಚೆಕ್ ಪೋಸ್ಟ್ ತೆರೆದು ಹಣ ವಸೂಲು ಮಾಡುತ್ತಿರುವುದು ಕಂಡುಬಂದಿದೆ. ಈಗಾಗಲೆ ಸಂಬಂಧಪಟ್ಟವರ ಮೇಲೆ ಎಫ್.ಐ.ಆರ್. ದಾಖಲಿಸಿದ್ದು, ಇದೀಗ ಅಕ್ರಮ ಚೆಕ್ ಪೋಸ್ಟ್ ತೆರವುಗೊಳಿಸಿದೆ. ಇಂದಿಲ್ಲಿ ನಡೆದ ಸಭೆಯಲ್ಲಿ ತಪಾಸಣೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸುವಂತೆ ಜಿಲ್ಲೆಯ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಳೆದ ಮೂರು ದಿನದಿಂದ ಬೀದರ, ಕಲಬುರಗಿ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಸುಮಾರು 80–85 ಅಧಿಕಾರಿ–ಸಿಬ್ಬಂದಿಗಳ ತಂಡ ತಪಾಸಣೆಯಲ್ಲಿ ನಿರತವಾಗಿದೆ ಎಂದರು.

ಲೋಕಾಯಕ್ತ ಸಂಸ್ಥೆ ನಡೆಸುವ ದಾಳಿ ಪ್ರಕರಣಗಳಲ್ಲಿ ಶೇ.25ರಷ್ಟು ಅಪಾದಿತರಿಗೆ ಮಾತ್ರ ಶಿಕ್ಷೆಯಾಗುತ್ತಿದೆ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ನ್ಯಾ. ಬಿ.ಎಸ್.ಪಾಟೀಲ ಅವರು, ಶೇ.60–75 ರಷುಟ ಶಿಕ್ಷೆ ಆಗಬೇಕೆಂಬುದು ನಮ್ಮ ಉದ್ದೇಶವಾಗಿದೆಯಾದರು ಪ್ರಕರಣಗಳಲ್ಲಿ ದೂರು ನೀಡಿದ ವ್ಯಕ್ತಿಯೆ ನಂತರ ದೂರು ನಾನು ಕೊಟ್ಟಿಲ್ಲ ಎಂದು ಉಲ್ಟಾ ಹೊಡೆಯುತ್ತಾರೆ. ಸಾಕ್ಷಿ ಹೇಳಬೇಕಾದ ಛಾಯಾ ಸರ್ಕಾರಿ ನೌಕರ ಸರಿಯಾಗಿ ಹೇಳಿಕೆ ನೀಡದ ಕಾರಣ ಶಿಕ್ಷೆ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಜೂನ್ 2022ರಲ್ಲಿ ತಾವು ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ 8 ಸಾವಿರ ಪ್ರಕರಣಗಳು ಬಾಕಿ ಇದ್ದವು. ಇದುವರೆಗೆ ಹೊಸದಾಗಿ 44 ಸಾವಿರ ಪ್ರಕರಣ ದಾಖಲಿಸಿ ಇದರಲ್ಲಿ 23 ಸಾವಿರ ಪ್ರಕರಣ ವಿಲೇವಾರಿ ಮಾಡಲಾಗಿದೆ. ಭ್ರಷ್ಟಾಚಾರ ರಹಿತ ಸಮಾಜ ನಿರ್ಮಾಣ ಮಾಡುವಲ್ಲಿ ಎಲ್ಲರ ಪಾತ್ರ ಇದೆ. ಸರ್ಕಾರಿ ನೌಕರ ಇರುವುದು ಜನರ ಕೆಲಸಕ್ಕೆ ಎಂಬುದನ್ನು ಜನ ಮೊದಲು ಅರ್ಥ ಮಾಡಿಕೊಳ್ಳಬೇಕು. ದುಡ್ಡು ಕೊಡದೆ ಕೆಲಸ ಮಾಡಿಸಿಕೊಳುವ ಪ್ರವೃತ್ತಿ ಈ ಭಾಗದಲ್ಲಿ ಹೆಚ್ಚು ಬೆಳೆಯಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಲೋಕಾಯುಕ್ತ ಹೆಸರಿಲ್ಲಿ ವಸೂಲಿಗಿಳಿದರೆ ದೂರು ಕೊಡಿ: ಇನ್ನು ಇತ್ತೀಚೆಗೆ ಲೋಕಾಯುಕ್ತ ಪೊಲೀಸ್ ಹೆಸರಿನಲ್ಲಿ ಬ್ಲ್ಯಾಕ್ ಮೇಲ್ ಮಾಡುವ ಪ್ರವೃತ್ತಿ ಅಲ್ಲಲ್ಲಿ ಕೇಳಿಬರುತ್ತಿದೆ. ಲೋಕಾಯುಕ್ತ ಎಂದಾಕ್ಷಣ ಅಧಿಕಾರಿಗಳು ಹಣ ನೀಡುತ್ತಿದ್ದಾರೆ. ಹೀಗೆ ಲೋಕಾಯುಕ್ತ ಹೆಸರಿನಲ್ಲಿ ಯಾರೆ ದುಡ್ಡು ಕೇಳಿದಲ್ಲಿ ಅಗತ್ಯ ದಾಖಲೆಗಳೊಂದಿಗೆ ಲೋಕಾಯುಕ್ತ ಸಂಸ್ಥೆಗೆ ದೂರು ಕೊಡಿ. ಮುಂದಿನದು ಲೋಕಾಯುಕ್ತ ಸಂಸ್ಥೆ ನೋಡಿಕೊಳ್ಳಲಿದೆ ಎಂದು ಬಿ.ಎಸ್.ಪಾಟೀಲ ಸ್ಪಷ್ಟಪಡಿಸಿದರು.

ಯುದ್ದೋಪಾದಿಯಲ್ಲಿ ಆರ್.ಓ. ಪ್ಲ್ಯಾಂಟ್ ಸರಿಪಡಿಸಿ: ಕಲಬುರಗಿ ಜಿಲ್ಲೆಯಾದ್ಯಂತ 2011–12ರಲ್ಲಿ ತಲಾ 10 ಲಕ್ಷ ರೂ. ವೆಚ್ಚದಲ್ಲಿ ಗ್ರಾಮೀಣದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ 510 ನೀರು ಶುದ್ಧಿಕರಣ ಘಟಕ ಸ್ಥಾಪಿಸಲಾಗಿದ್ರು, ಇದರಲ್ಲಿ ಪ್ರಸ್ತುತ ಬಳಕೆಯಲ್ಲಿ 132 ಮಾತ್ರ ಇವೆ. 336 ಕಾರ್ಯಚರಣೆ ಇಲ್ಲದೆ ಸ್ಥಗಿತಗೊಂಡಿವೆ. ಕಲುಷಿತ ನೀರು ಸೇವನೆಯಿಂದಾಗುವ ಅವಘಡ ತಪ್ಪಿಸಲೆಂದೆ ಸರ್ಕಾರ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿದೆಯಾದರು, ಅಧಿಕಾರಿಗಳ ಬೇಜವಾಬ್ದಾರಿತನ, ನಿಷ್ಕಾಳಜಿಯಿಂದ ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿವೆ. ಇದೆಲ್ಲವನ್ನು ಯುದ್ದೋಪಾದಿಯಲ್ಲಿ ಸರಿಪಡಿಸಿ ಶುದ್ಧ ಕುಡಿಯುವ ನೀರು ಪೂರೈಕೆಗೆ ಸದರಿ ಘಟಕವನ್ನು ಮರು ಚಾಲನೆ ಮಾಡುವಂತೆ ಸೂಚನೆ ನೀಡಲಾಗಿದೆ. ಈ ಬಗ್ಗೆ ಲೋಕಾಯುಕ್ತ ಸಂಸ್ಥೆ ಸ್ವಯಂ ದೂರು ದಾಖಲಿಸಿಕೊಂಡು ವಿಚಾರಣೆ ಸಹ ಮಾಡಲಿದೆ ಎಂದು ನ್ಯಾ.ಬಿ.ಎಸ್.ಪಾಟೀಲ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಷ್ ಖರ್ಬಿಕರ್, ಕಾರ್ಯದರ್ಶಿ ಶ್ರೀನಾಥ್ ಕೆ., ಅಪರ ನಿಬಂಧಕ(ವಿಚಾರಣೆ) ವಿಜಯಾನಂದ., ಕಲಬುರಗಿ ಲೋಕಾಯುಕ್ತ ಎಸ್.ಪಿ. ಸಿದ್ದರಾಜು, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ. ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ ಪಾಟೀಲ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತರಾದ ಸಾಹಿತ್ಯ, ಪ್ರಭುರೆಡ್ಡಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಟೆಂಡರ್ ಕರೆದ ಪ್ರವಾಸೋದ್ಯಮ: ಸ್ಥಳೀಯರ ವಿರೋಧ ಗ್ರಾ. ಪಂ.ಗೆ ಮನವಿ ಸಲ್ಲಿಕೆ



## ಸೌಕರ್ಯ ಇಲ್ಲದೇ ಟೆಂಡರ್ ಕರೆಯುವುದು ಸರಿಯಲ್ಲ.

**ಹಾಫ್‌ಮೂನ್ ಬೀಚ್‌ಗೆ ಕರೆದ ಟೆಂಡರ್‌ನ್ನು ತಕ್ಷಣ ಸ್ಥಗಿತಗೊಳಿಸುವಂತೆ ಗ್ರಾಮ ಪಂಚಾಯತ ವತಿಯಿಂದ ಠರಾವು ಮಾಡಿ ಪ್ರವಾಸೋದ್ಯಮ ಇಲಾಖೆಗೆ ನೀಡಬೇಕು. ಯಾವುದೇ ಮೂಲ ಸೌಕರ್ಯ ಇಲ್ಲದೇ ಬೀಚ್‌ಗಳಿಗೆ ಟೆಂಡರ್ ಕರೆಯುವುದು ಸರಿಯಲ್ಲ. ಹಾಗೇ ಸಣ್ಣಪುಟ್ಟ ಉದ್ಯೋಗಿಗಳ ಹೊಟ್ಟೆಯ ಮೇಲೆ ಬರೆ ಎಳೆದಂತಾಗುತ್ತದೆ ಎಂದು ಅವರು ಸಲ್ಲಿಸಿದ ಮನವಿಯಲ್ಲಿ ವಿನಂತಿಸಿದ್ದಾರೆ.**

• **ನಾಗರಾಜ ಮಂಜಗುಣಿ ಗೋಕರ್ಣ:**

ಪ್ರವಾಸಿಗರ ಸ್ವರ್ಗ ಎನಿಸಿದ ಗೋಕರ್ಣದ ವಿವಿಧ ಬೀಚ್‌ಗಳಿಗೆ ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಿದ್ದರು. ವಾಹನ ತೆರಳುವ ಓಂ ಬೀಚ್, ಕುಡ್ಲೆ ಬೀಚ್, ಪ್ಯಾರಾಡೈಸ್ ಬೀಚ್‌ಗಳಿಗೆ ಜಲಸಾಹಸ ಕ್ರೀಡೆ ನಡೆಸಲು ಟೆಂಡರ್ ನೀಡುತ್ತಿದ್ದರು. ಆದರೆ ಈ ಬಾರಿ ರಸ್ತೆಯೇ ಇಲ್ಲದ ಹಾಗೂ ಮೂಲಭೂತ ಸೌಲಭ್ಯ ಇಲ್ಲದ ಹಾಫ್‌ಮೂನ್ ಬೀಚ್‌ಗೂ ಟೆಂಡರ್ ಕರೆದಿರುವುದು ಸಹಜವಾಗಿಯೇ ಸ್ಥಳೀಯರಿಗೆ ಆಕ್ರೋಶ ವ್ಯಕ್ತವಾಗಿದೆ.

ಪ್ರವಾಸೋದ್ಯಮ ಇಲಾಖೆ ಹೊರಡಿಸಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಹಾಫ್‌ಮೂನ್ ಬೀಚ್ ಸೇರ್ಪಡೆಯಾಗಿರುವುದರ ಜತೆಗೆ ಉಳಿದ ಬೀಚ್‌ಗಳಿಗೂ ಟೆಂಡರ್ ಕರೆದಿದ್ದು, ಜ.14 ರ ಒಳಗೆಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಅಲ್ಲಿ ಹಾಕಿರುವ ದಾಖಲೆಗಳು ಬೇರೆಯಾರೂ ಅರ್ಜಿ ಹಾಕಲಾರದಂತಹ ಮಾಹಿತಿಯನ್ನು ಕೇಳಿದ್ದಾರೆ. ಇದು ಯಾರದೋ ಉದ್ದೇಶವಿಟ್ಟುಕೊಂಡು ಈ ಹಿಂದೆ ವಿವಿಧ ಬೀಚ್ ನಡೆಸುತ್ತಿದ್ದ ಗುತ್ತಿಗೆದಾರರಿಗೆ ಸಿಗುವಂತೆ ಮಾಡುವ ಹುನ್ನಾರವಾಗಿದೆ ಎಂದು ವಿವಿಧ ಪ್ರವಾಸಿ ಬೋಟ್‌ನವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತದಡಿ, ಮೂಡಂಗಿ, ಅಘನಾಶಿನಿ ಹೀಗೆ ವಿವಿಧ ಪ್ರವಾಸಿ ಬೋಟ್‌ಗಳನ್ನು ಹೊಂದಿದ್ದು, ಅವರು ಬೇರೆ ಯಾವುದೇ ಬೀಚ್‌ಗಳಿಗೆ ತೆರಳಲಾಗದೇ ಹಾಫ್‌ಮೂನ್ ಬೀಚ್‌ಗೆ ಕರೆದುಕೊಂಡು ಹೋಗಿ ಬರುತ್ತಿದ್ದರು. ಆದರೆ ಈ ಟೆಂಡರ್ ಪ್ರಕ್ರಿಯೆಯಿಂದ ಸ್ಥಳೀಯ ಪ್ರವಾಸಿ ಬೋಟ್‌ನವರ ಹೊಟ್ಟೆಗೆ ಛಾಪು ಹಾಕಿದಂತಾಗಿದೆ. ಅವರ ಉದ್ಯೋಗವನ್ನು ಕಸಿದುಕೊಂಡು ಅನಾಥರನ್ನಾಗಿಸುವ ಹುನ್ನಾರದ ಜೊತೆಗೆ ಪ್ರವಾಸೋದ್ಯಮ ಇಲಾಖೆ ಹಣ ಗಳಿಸುವ ಉದ್ದೇಶದಿಂದ ಮೂಲ ಸೌಲಭ್ಯವಿಲ್ಲದೇ ಬೀಚ್‌ಗೆ ಟೆಂಡರ್

ಕರೆದಿರುವುದು ಸಹಜವಾಗಿಯೇ ಆಕ್ರೋಶಕ್ಕೆ ಕಾರಣವಾಗಿದೆ.

ಹಾಫ್‌ಮೂನ್ ಬೀಚ್‌ಗೆ ತೆರಳಲು ಯಾವುದೇ ಕಾಲುದಾರಿಯೂ ಇಲ್ಲ. ಹೀಗಾಗಿ ಇಲ್ಲಿ ಟೆಂಡರ್ ನೀಡಲು ಮುಂದಾಗಿದೆ. ಇಲ್ಲಿ ಸಣ್ಣಪುಟ್ಟ ಏನೇ ಅವಘಡ ನಡೆದರೂ ಒಂದು ಅಂಬುಲೆನ್ಸ್ ಬರುವಷ್ಟು ಜಾಗವಿಲ್ಲ. ಹಾಗಾದರೆ ಇವರನ್ನು ಬೋಟ್ ಮೂಲಕವೇ ಸಾಗಿಸಬೇಕಾಗಿರುವುದರಿಂದ ಬಹುದೊಡ್ಡ ಅಪಾಯ ಸಂಭವಿಸುವ ಸಾಧ್ಯತೆಯಿದೆ. ಟೆಂಡರ್ ಪಡೆದ ನಂತರ ಗುತ್ತಿಗೆದಾರನು ಅಲ್ಲಿ ಅಂಗಡಿ ಹೊಟೇಲ್‌ಗಳನ್ನು ನಿರ್ಮಿಸಲು ಮುಂದಾಗುತ್ತಾರೆ. ಅಲ್ಲಿ ಏನಾದರೂ ಅವಘಡ ನಡೆದರೆ ತಕ್ಷಣ ವಾಹನದ ಮೂಲಕ ಸಾಗಿಸಲು ಯಾವುದೇ ಅವಕಾಶವಿಲ್ಲ. ಸುತ್ತಲೂ ಅರಣ್ಯ ಇಲಾಖೆಯ ಜಾಗವಿದ್ದು, ಸ್ಥಳೀಯರು ಮಾತ್ರ ಕಾಲುದಾರಿಯಲ್ಲಿ ನಡೆದು–ಕೊಂಡು ಹೋಗಿಬರುತ್ತಾರೆ. ಅದು ಹೊರಗಿನಿಂದ ಬಂದವರಿಗೆ ಸಾಧ್ಯವಾಗುವುದಿಲ್ಲ.

ಕೆಲವರ್ಷಗಳಿಂದ ನಾವು ಇದೇ ಬೀಚ್‌ಗಳನ್ನು ನಂಬಿಕೊಂಡು ಕೆಲವು

ಬೋಟ್‌ನವರನ್ನು ಕರೆತಂದು ನಂತರ ಅಲ್ಲಿಂದ ವಾಪಾಸ್ ಕರೆದುಕೊಂಡು ಹೋಗಲಾಗುತ್ತಿತ್ತು. ಇದು ನಮ್ಮ ಮೇಲೆ ಮಾಡುತ್ತಿರುವ ದಾಳಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ತಕ್ಷಣ ಹಾಫ್‌ಮೂನ್ ಬೀಚ್‌ಗೆ ಕರೆಯಲಾದ ಟೆಂಡರ್‌ನ್ನು ರದ್ದುಪಡಿಸುವಂತೆ ಪ್ರವಾಸೋದ್ಯಮ ಇಲಾಖೆಗೆ ಪ್ರವಾಸಿ ಬೋಟ್ ಮಾಲಕರು

ಗ್ರಾಮ ಪಂಚಾಯತಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ಗ್ರಾ.ಪಂ. ಅಧ್ಯಕ್ಷೆ ಸುಮನಾ ಗೌಡ ಮಾತನಾಡಿ, ತಾವು ನೀಡಿದ ಮನವಿಯನ್ನು ಜಿಲ್ಲಾಡಳಿತಕ್ಕೆ ಮತ್ತು ಪ್ರವಾಸೋದ್ಯಮ ಇಲಾಖೆಗೆ ನೀಡಿ ಮಾಹಿತಿ ಪಡೆಯುತ್ತೀರಿ ಎಂ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರಾಜು ಪಿರನಕರ, ಸುಜಯ ನಾಯ್ಕ, ರಾಜೇಶ ಹೊಸ್ಕಟ್ಟಾ, ಸತೀಶ ಪಿರನಕರ, ಪ್ರಕಾಶ ಮೂಡಂಗಿ, ಸಂದೀಪ ಮುದಗೇಕರ, ಗ್ರಾ.ಪಂ. ಸದಸ್ಯರಾದ ರವಿಕಿರಣ ನಾಯ್ಕ, ಪುಷ್ಪಾ ಕಲೇಕರ ಸೇರಿದಂತೆ ಮೀನುಗಾರರು ತದಡಿ ಮೂಡಂಗಿ ಗೋಕರ್ಣ ಭಾಗದ ಸಾರ್ವಜನಿಕರು ಉಪಸ್ಥಿತರಿದ್ದರು.

# ಜನ ಜಾಗೃತಿಗೆ ರಾಜ್ಯ ಮಟ್ಟದ ಸಮಾವೇಶ

**ತೀರ್ಥಹಳ್ಳಿ ಶಿವಮೊಗ್ಗ:** ದಲಿತ ಚೇತನ ದಿ. ಲಕ್ಷ್ಮಿ ನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ "ರಾಜ್ಯ ಮಟ್ಟದ ಜನಜಾಗೃತಿ ಸಮಾವೇಶ"ವನ್ನು ಜ.12ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕೊಪ್ಪ ರಸ್ತೆಯ ಬಂಟರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.ಸಮಾವೇಶವನ್ನು ಆಯುಷ್ಮಾನ್ ಕಿಮ್ಮನೆ ರತ್ನಾಕರ್, ಮಾಜಿ ಸಚಿವರು ಕರ್ನಾಟಕ ಸರ್ಕಾರ ಅವರು ಉದ್ಘಾಟಿಸಲಿದ್ದಾರೆ. ಆಯುಷ್ಮಾನ್ ಅಬ್ಬಯ್ಯ ಪ್ರಸಾದ್, ಶಾಸಕರು ಹುಬ್ಬಳ್ಳಿಧಾರವಾಡ ಪೂರ್ವ ಕ್ಷೇತ್ರ ಹಾಗೂ ಅಧ್ಯಕ್ಷರು, ಕೊಳಚೆ ನಿರ್ಮೂಲನೆ ಮಂಡಳಿ ಬೆಂಗಳೂರು ಅವರು ಬಾಬಾ ಸಾಹೇಬ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಿದ್ದಾರೆ.ಈ ಸಮಾರಂಭದ ಘನ ಅಧ್ಯಕ್ಷತೆಯನ್ನು ಆಯುಷ್ಮಾನ್ ಶಾಮರಾವ್ ಘಾಟೆ, ರಾಜ್ಯ ಸಂಚಾಲಕರು ಕ.ರಾ.ದ.ಸಂ.ಸಮಿತಿ ಅವರು ವಹಿಸಲಿದ್ದಾರೆ. ಮುಖ್ಯ ಭಾಷಣಕಾರರಾಗಿ ಆಯುಷ್ಮಾನ್ ಆರ್.ಡಿ. ಮಲ್ಲಯ್ಯ, ಪ್ರಾಂಶುಪಾಲರು, ಶರಾವತಿ ಪ್ರಥಮ ದರ್ಜೆ ಕಾಲೇಜು, ಕೋಣಂದೂರು ಹಾಗೂ ಆಯುಷ್ಮಾನ್ ಡಾ. ಪ್ರದೀಪ್, ಸಹ ಪ್ರಾಧ್ಯಾಪಕರು, ಶರಾವತಿ ಪ್ರಥಮ ದರ್ಜೆ ಕಾಲೇಜು, ಕೋಣಂದೂರು ಅವರು ಆಗಮಿಸಲಿದ್ದಾರೆ.ಇದಲ್ಲದೆ ಕ.ರಾ.ದ.ಸಂ.ಸಮಿತಿಯ ರಾಜ್ಯ ಮಹಿಳಾ ಸಂಚಾಲಕಿ ಶೋಭಾ ಕಟ್ಟಿಮನಿ ಸೇರಿದಂತೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಸಮಾವೇಶದ ಆಯೋಜನೆಯಲ್ಲಿ ಭಾಗವಹಿಸಲಿದ್ದಾರೆ. ನಾಡಿನ ಪ್ರಗತಿಪರ ಚಿಂತಕರು, ಸಾಹಿತಿಗಳು, ದಲಿತಪರ ಸಂಘಟನೆಗಳು, ದಿ. ಲಕ್ಷ್ಮಿ ನಾರಾಯಣ ನಾಗವಾರ ಅವರ ಒಡನಾಡಿಗಳು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಸಂಘಟಕರು ಮನವಿ ಮಾಡಿದ್ದಾರೆ.

# ಸ್ಥಳೀಯ ನಾಯಕರೊಂದಿಗೆ ಡಿಸಿಎಂ ಸಭೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬ್ಯಾನರ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿ ಹಾಗೂ ಗುಂಡಿನ ದಾಳಿಗೆ ಮೃತಪಟ್ಟ ಕೈ ಕಾರ್ಯಕರ್ತ ಪ್ರಕರಣಕ್ಕೆ ಸಂಬಂಧಿಸಿ ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸ್ಥಳೀಯ ನಾಯಕರೊಂದಿಗೆ, ನಗರದ ಹೊಸ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಕೆಲ ಕಾಲ ಘಟನೆ ಬಗ್ಗೆ ಸುಧೀರ್ಘ ಚರ್ಚೆ ನಡೆಸಿದರು. ಬ್ಯಾನರ್ ಕಟ್ಟುವ ವಿಚಾರಕ್ಕೆ ನಡೆದ ಸಣ್ಣ ಗಲಾಟೆ,

ಈ ಹಂತಕ್ಕೆ ತಲುಪಿದ್ದು ಹೇಗೆ, ಗುಂಡಿನ ದಾಳಿಯಲ್ಲಿ ಕೈ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಮೃತಪಟ್ಟಿರುವ ಕುರಿತು ಸೇರಿದಂತೆ ಘಟನೆಯ ಸಂಪೂರ್ಣ ವರದಿಯನ್ನು ಒನ್ ಟು ಒನ್ ನಾಯಕರಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ.

ಈ ಸಂದರ್ಭದಲ್ಲಿ ವಿಶೇಷವಾಗಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರೊಂದಿಗೆ ಡಿಸಿಎಂ ಅವರು ಸುಧೀರ್ಘ ಚರ್ಚೆ ನಡೆಸಿದರು ಎನ್ನಲಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಸಂಸದ ಈ.ತುಕಾರಾಂ, ರಾಜ್ಯಸಭೆ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್, ಶಾಸಕರಾದ ಬಿ.ಎಂ. ನಾಗರಾಜ್,

ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ. ನಾಗೇಂದ್ರ, ನಗರ ಶಾಸಕ ಭರತ್ ರೆಡ್ಡಿ, ಶಾಸಕರಾದ ಲತಾ, ಜೆ.ಎನ್.ಗಣೇಶ್, ವಿಧಾನ ಪರಿಷತ್ ಸದಸ್ಯ ಬಸವನಗೌಡ ಬಾದರ್ಲಿ, ಕೆಪಿಸಿಸಿ ಮಾಜಿ ಅಧ್ಯಕ್ಷ, ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ, ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಪಾಲಿಕೆ ಮೇಯರ್ ಪಿ.ಗಾದೆಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಮುಂದಾದರೆ ಕಠಿಣ ಕ್ರಮ

# ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ



• **ಮಲ್ಲಮ್ಮ ನುಡಿ ವಾರ್ತೆ ಶಹಾಪುರ:**

ರಾಜ್ಯದಲ್ಲಿಯೇ ಮೊಟ್ಟಮೊದಲು ಯಾದಗಿರಿ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲೆಯಾದ್ಯಂತ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಅಧಿಕೃತವಾಗಿ ಆದೇಶ ಮಾಡುವ ಮೂಲಕ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನಕ್ಕೆ ಮುನ್ನುಡಿ ಬರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಶಹಾಪುರ ತಾಲೂಕಿನ ಉಕ್ಕಿನಾಳ ಗ್ರಾಮ ಪಂಚಾಯಿತಿನಲ್ಲಿ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ ತಿಳಿಸಿದರು.

ಶಹಾಪುರ ತಾಲೂಕಿನ ಉಕ್ಕಿನಾಳ ಗ್ರಾಮದಲ್ಲಿ ಆಯೋಜಿಸಿದ್ದ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಪ್ರತಿ ಗ್ರಾಮಗಳ ಕಿರಾಣಿ, ಪಾನ್‌ಶಾಪ್‌ಗಳಲ್ಲಿ ಅಕ್ರಮ ಮದ್ಯ ಮಾರಾಟ ಅತೀ ಹೆಚ್ಚಾಗಿ ನಡೆದಿದೆ. ಸರಳವಾಗಿ ಮದ್ಯ ಕೈಗೆ ಸಿಗುವುದರಿಂದ ಸಮಾಜದಲ್ಲಿ ಕುಡುಕರ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದರಿಂದ ಕುಟುಂಬಗಳಲ್ಲಿ ಮನಶಾಂತಿ, ನೆಮ್ಮದಿ ಹಾಳಾಗಿ ಹೋಗಿದೆ. ಹಳ್ಳಿಗಳಲ್ಲಿ ಸಿಗುವ ಮದ್ಯ ಅಸಲಿಯೂ ಅಥವಾ ನಕಲಿಯೂ ಗೊತ್ತಿಲ್ಲ. ಇದರಿಂದ ಕುಡಿಯುವ ವ್ಯಕ್ತಿ ಮತ್ತು ಆತನ ಕುಟುಂಬ ಸಂಕಷ್ಟ ಸಿಲುಕಿ ಪರದಾಡುವಂತಾಗುತ್ತದೆ. ಹೀಗಾಗಿ ಗ್ರಾಮಗಳಲ್ಲಿ ಜನರು ಸ್ವ–ಯಂ ಪ್ರೇರಿತರಾಗಿ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ತಡೆಯಬೇಕಿದೆ. ಇದಕ್ಕೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಸದಾ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಗ್ರಾಮಗಳಲ್ಲಿ ಸಿಗುವ ಮದ್ಯಪಾನ ಸೇವಿಸುವ ಅನೇಕ ಯುವಕರು ಚಿಕ್ಕ ವಯಸ್ಸಿನಲ್ಲಿ ಮರಣ ಹೊಂದುತ್ತಿದ್ದಾರೆ. ಇದಕ್ಕೆ ಯಾರು ಹೊಣೆ?. ಪರವಾನಗಿ ಇರುವ ಕಡೆಗಳಲ್ಲಿ ಮಾತ್ರ ಮಾರಾಟ ಮಾಡಬೇಕು. ಗ್ರಾಮಗಳಲ್ಲಿ ಮಾರಾಟ ಮಾಡಲು ಯಾವುದೇ ಹಕ್ಕು ಬಾರ್ ಮಾಲೀಕರಿಗೆ ಇಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಳ್ಳಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟಕ್ಕೆ ಮುಂದಾದರೆ ಅಂತಹ ಬಾರ್ ಮಾಲೀಕರ ವಿರುದ್ಧ ಅಬಕಾರಿ ಇಲಾಖೆ ಮೇಲಾಧಿಕಾರಿಗಳಿಗೆ ಪತ್ರ ಬರೆಯುವ ಮೂಲಕ ಕಠಿಣ ಕ್ರಮಕ್ಕೆ ಸೂಚಿಸಲಾಗುವುದು ಎಂದು ಎಚ್ಚರಿಸಿದರು.

ಮದ್ಯಪಾನ ಮುಕ್ತ ಗ್ರಾಮ ಅಭಿಯಾನಕ್ಕೆ ಸಹಕಾರ ನೀಡಿದ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಶರಬೈ ಹಾಗೂ ಗ್ರಾಪಂ ಮುಖಂಡರ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಪ್ರತಿಯೊಬ್ಬನಿಗೆ ಆರೋಗ್ಯ ಅತ್ಯಂತ ಮುಖ್ಯವಾಗಿದೆ. ಒಮ್ಮೆ ಚಟಗಳಿಗೆ ಬಲಿಯಾದರೆ ಅದರಿಂದ ಹೊರಬರಲು ಅಸಾಧ್ಯ. ಆದ್ದರಿಂದ ದುಶ್ಚಟಗಳಿಗೆ ಯುವಕರು ಹಾಗೂ ಸಾರ್ವಜನಿಕರು ಬಲಿಯಾಗಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಸಲಹೆ ನೀಡಿದರು.

ಜನರಿಗೆ ಮದ್ಯಪಾನದಿಂದ ಆಗುವ ದುಷ್ಪರಿಣಾಮದ ಕುರಿತು ಜಿಲ್ಲೆಯಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ. ಇದರ ಜತೆಗೆ ಪ್ರಜ್ಞಾವಂತರು ಹಾಗೂ ಮಹಿಳೆಯರು ಮದ್ಯಪಾನ ಮುಕ್ತ ಗ್ರಾಮಕ್ಕೆ ಮುಂದಾಗಬೇಕು ಎಂದು ಹೇಳಿದರು.

ಜಿಲ್ಲಾ ಕೇಂದ್ರದಲ್ಲಿ ಮದ್ಯವ್ಯಸನಿಗಳಿಗೆ ಪುನರ್ವಸತಿ ಕೇಂದ್ರ ಸ್ಥಾಪಿಸಲು ಕೆಕೆಆರ್‌ಡಿಬಿ ಅನುದಾನದಲ್ಲಿ ಒಂದು ಕೋಟಿ ನೀಡುವುದಾಗಿ ಸಚಿವರು ತಿಳಿಸಿದರು.

ಇದೇ ವೇಳೆ, 2024–25ನೇ ಸಾಲಿನ ಮುಖ್ಯಮಂತ್ರಿ ವಿಶೇಷ ಅನುದಾನ ಉಕ್ಕಿನಾಳ ಗ್ರಾಮದಿಂದ ಯಲ್ಲಮ್ಮ ಗುಡಿಗೆ ಹೋಗುವ ರಸ್ತೆ ಯಡ್ರಾಮಿ ಗಡಿಭಾಗ, 2025–26 ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ ಉಕ್ಕಿನಾಳ ಗ್ರಾಮದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

ಯಾದಗಿರಿ ಜಿಲ್ಲೆಯ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ ಅವರು ಮಾತನಾಡಿ ಯಾದಗಿರಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನಕ್ಕೆ ಕ್ರಮ ಕೈಗೊಳ್ಳಲಾಗುವುದು. ಆ ಮೂಲಕ ಮದ್ಯಪಾನದಿಂದ ಆಗುವ ದಷ್ಪರಿಣಾಮದ ಕುರಿತು ಜನರಿಗೆ ಜಾಗೃತಿ ಮೂಡಿಸಲಾಗುತ್ತದೆ. ಮದ್ಯಪಾನ ಸೇವಿಸುವ ವ್ಯಕ್ತಿಗಳಿಗೆ ಕುಟುಂಬಸ್ಥರು, ಗ್ರಾಮಸ್ಥರು ಸಹ ತಿಳಿವಳಿಕೆ ಹೇಳಬೇಕು. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಜನರು ಸ್ವಯಂ ಪ್ರೇರಿತರಾಗಿ ತಡೆಯಬೇಕಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಪಿಡಿಓ ಮಡಿವಾಳಪ್ಪ ಮುದ್ನೂರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಗೇನುಸಿಂಗ್ ರಾಠೋಡ್ ಸೇರಿದಂತೆ ಗ್ರಾಮದ ಮುಖಂಡರು ಇದ್ದರು.

# ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಥಮ, 24 ಚಿನ್ನದ ಪದಕ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**

ತಾಲೂಕಿನ ವಂದಿಗೆಯ ಅದಿತಿ ನಾಯಕ ಎಂ.ಎಸ್ಸಿ ರಸಾಯನ ಶಾಸ್ತ್ರ ವಿಭಾಗದಲ್ಲಿ 24 ಚಿನ್ನದ ಪದಕ ಹಾಗೂ 8 ನಗದು ಬಹುಮಾನವನ್ನು ಪಡೆಯುವ ಮೂಲಕ ಮೈಸೂರಿನ ಮಾನಸಗಂಗೋತ್ರಿ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಸೋಮವಾರ ಮೈಸೂರಿನ ಕ್ರಾಫರ್ಡ್ ಭವನದಲ್ಲಿ ನಡೆದ ವಿಶ್ವ ವಿದ್ಯಾನಿಲಯದ 106 ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲರಾದ ಥಾವರ್ ಚಂದ ಗೆಹ್ಲೋಟ್, ಇಸ್ರೋ ಮಾಜಿ ಅಧ್ಯಕ್ಷ ಡಾ ಎಸ್.ಸೋಮನಾಥ, ಉನ್ನತ ಶಿಕ್ಷಣ ಸಚಿವರಾದ (ಉಪಕುಲಪತಿ) ಡಾ.ಎಮ್.ಸಿ.ಸುಧಾಕರ್‌ರವರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.

ವಿದ್ಯಾರ್ಥಿನಿ ಅದಿತಿ ನಾಯಕ ಈ ಹಿಂದೆ ಮಂಗಳೂರಿನಲ್ಲಿ ಬಿ.ಎಸ್.ಇ ವ್ಯಾಸಂಗ ಮಾಡುತ್ತಿರುವ



ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೂ ಪ್ರಥಮ ಸ್ಥಾನ ಪಡೆದಿದ್ದರು. ನಿರಂಜನ ನಾಯಕ, ಹಾಗೂ ಶುಭಲಕ್ಷ್ಮೀ ದಂಪತಿಯ ಪುತ್ರಿಯಾಗಿರುವ ಈಕೆಯ ಸಾಧನೆಗೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಕಲ್ಲೇಶ್ವರದ ಪರಿಶಿಷ್ಟ ಪಂಗಡಗಳ ಮನೆಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**



ತಾಲೂಕಿನಲ್ಲಿಯೂ ಕೂಡ ಸಾವಿರಾರು ಕುಟುಂಬಗಳು ಜೀವನ ನಡೆಸುತ್ತಿದ್ದಾರೆ. ಸರಕಾರ ಅರ್ಜಿ ಕರೆದಾಗಲೆಲ್ಲ ಅವರು ತುಂಬುತ್ತಲೇ ಬರುತ್ತಿದ್ದಾರೆ. ಆದರೆ ಪದೇ ಪದೇ ತಿರಸ್ಕಾರಗೊಂಡಿದ್ದರಿಂದಾಗಿ ಹೋರಾಟ ನಡೆಸುತ್ತಲೇ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ಅವರು ಕಲ್ಲೇಶ್ವರಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ಈ ಹಿಂದೆ ಅನೇಕ ಬಾರಿ ಅರಣ್ಯವಾಸಿಗಳು ಸರಕಾರದ ನಿಯಮಾವಳಿಯಂತೆ ಅರ್ಜಿ ಸಲ್ಲಿಸಿದ್ದರು. ನಂತರ ಅರ್ಜಿ ತಿರಸ್ಕಾರಗೊಂಡ ನಂತರವೂ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಆದರೂ ಕೂಡ ಅರಣ್ಯವಾಸಿಗಳಿಗೆ ಹಕ್ಕು ಮಾತ್ರ ಇದುವರೆಗೂ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಕೆಲವು ಅರಣ್ಯಾಧಿಕಾರಿಗಳು ಬೆಳೆದು ನಿಂತ ಅಡಕೆಗಿಡ, ಬಾಳೆಗಿಡ ಕಡೆಯುತ್ತಿರುವುದು ಆಗಾಗ ಕಂಡುಬರುತ್ತದೆ.

ಅರಣ್ಯದಿಂದಲೇ ಆವೃತಗೊಂಡಿರುವ ಡೊಂಗ್ರಿ ಗ್ರಾಮ ಪಂಚಾಯತ ವ್ಯಾಪ್ತಿಯ ಕಲ್ಲೇಶ್ವರ ಗ್ರಾಮಕ್ಕೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಕಂದಾಯ ಹಾಗೂ ಅರಣ್ಯ ಇಲಾಖೆಯವರು ಪರಿಶಿಷ್ಟ ಪಂಗಡದ ಮೂರ್ನಾಲ್ಕು ಮನೆಗಳಿಗೆ ಭೇಟಿ ನೀಡಿ ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಂಡರು. ಸ್ಥಳೀಯರು ತಮ್ಮ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಬಳಿ ಹೇಳಿಕೊಂಡರು.

ಈ ಹಿಂದೆ ಅರ್ಜಿ ಸಲ್ಲಿಸಿದ ಕೆಲವು ಪರಿಶಿಷ್ಟ ಪಂಗಡದ ಅರ್ಜಿಗಳು ತಿರಸ್ಕಾರಗೊಂಡಿದ್ದವು. ಈ ಹಿನ್ನೆಲೆಯಲ್ಲಿ ಮರುಪರಿಶೀಲನೆಗಾಗಿ ಕೆಲವು ಪರಿಶಿಷ್ಟ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲಾಗಿದೆ ಎಂದು ಕೇಳಿಬಂದಿದೆ.

ಈ ಸಂದರ್ಭದಲ್ಲಿ ಕಾರವಾರದ ಅರಣ್ಯಸಂರಕ್ಷಣಾಧಿಕಾರಿ ರವಿಶಂಕರ, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಯೇಶ, ತಹಸೀಲ್ದಾರ ಡಾ. ಚಿಕ್ಕಪ್ಪ ನಾಯಕ, ಕಂದಾಯ ನಿರೀಕ್ಷಕ ಭಾರ್ಗವ ನಾಯಕ ಸೇರಿದಂತೆ ಸ್ಥಳೀಯ ಅರಣ್ಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕಲಿಕೆ ತಿಳಿಯುವುದೇ ಕಲಿಕಾ ಹಬ್ಬ: ಜಮಾದರ್



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಮಕ್ಕಳ ಕಲಿಕೆಯನ್ನು ತಿಳಿಯುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಕಲಿಕಾ ಹಬ್ಬವಾಗಿದೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ರಾಜಪ್ಪ ಜಮಾದರ್ ಹೇಳಿದರು. ಪಟ್ಟಣದ ಸರ್ಕಾರಿ ಕನ್ಯಾ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ 2025–26 ನೇ ಸಾಲಿನ ಚಿಟಗುಪ್ಪ ಕನ್ನಡ, ಚಿಟಗುಪ್ಪ ಉರ್ದು ಮತ್ತು ಉಡಬಾಳ ಕ್ಲಸ್ಟರ್ ಮಟ್ಟದ ಎನ್ ಕಲಿಕಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕಲಿತಿರುವುದನ್ನು ಇತರರೊಂದಿಗೆ ಸ್ಪರ್ಧಿಸಿ ತಮ್ಮ ಕಲಿಕೆಯನ್ನು ಉತ್ತಮವಾಗಿಸುವ ಅವಕಾಶ ಇದೆ. ಮಕ್ಕಳ ಕಲಿಕೆಯನ್ನು ಅಳೆಯಲು ಉತ್ತಮ ವೇದಿಕೆ ಇದಾಗಿದೆ ಎಂದರು. ಸ್ಥಳೀಯ ಕಲೆಗಳು, ಜನಪದ ಹಾಡುಗಳು ಮತ್ತು ಕಥೆಗಳಿಗೆ ಈ ಹಬ್ಬದಲ್ಲಿ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಇದು ಮಕ್ಕಳಿಗೆ ತಮ್ಮ ಸಂಸ್ಕೃತಿಯ ಪರಿಚಯ, ಚಿತ್ರಕಲೆ, ಮಣ್ಣಿನ ಮಾದರಿ ತಯಾರಿಕೆ, ಕಾಗದದ ಕೆಲಸ, ನಾಟಕಗಳ ಮೂಲಕ ಮಕ್ಕಳ ಸೃಜನಶೀಲ ಶಕ್ತಿಯನ್ನು ಉತ್ತೇಜಿಸಲಾಗುತ್ತದೆ ಎಂದರು. ಮುಖ್ಯ ಶಿಕ್ಷಕಿ ಸುನೀತಾ ಹಮಿಲಪುರಕರ್ ಮಾತನಾಡಿ, ಕಲಿಕಾ ಹಬ್ಬವು ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಿಸಲು ಮತ್ತು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಹಾಕಲು ಆಯೋಜಿಸಲಾಗುವ ಈ ಕಲಿಕಾ ಹಬ್ಬ ಒಂದು ವಿಶೇಷ ಕಾರ್ಯಕ್ರಮವಾಗಿದೆ ಎಂದರು. ಈ ಸಂದರ್ಭದಲ್ಲಿ ಉರ್ದು ಮಧ್ಯಮ ಮುಖ್ಯ ಶಿಕ್ಷಕಿ ವಸಿಮ್ ಸುಲ್ತಾನಾ, ಸಿಆರ್‌ಸಿ ರಾಮಚಂದ್ರ, ಉರ್ದು ಸಿಆರ್‌ಸಿ ನಾಜ್ಮಿನ, ಅಖಿಲ, ರಮೇಶ ಖ್ಯಾತ, ಸಂತೋಷ ತಾಂಡುರ, ಟಿಎಲ್ಸಿ ಸಂಜುಕುಮಾರ್, ಮಾಯಾ, ಅನ್ನಪೂರ್ಣ, ಸೀಮಾ, ಕಮಲಾ, ಗಣಪತಿ, ಮಲ್ಲಪ್ಪ, ಸುಖಲತಾ, ಜಮುನಾಬಾಯಿ, ಪ್ರಿಯಾಂಕ, ಸವಿತಾ, ಪೂಜಾ, ಪೂರ್ಣಿಮಾ, ರೇವಶೆಟ್ಟಿ ತಂಗಾ, ಶಿವಕುಮಾರ್, ನಾಗಪ್ಪ, ರಾಜಶೇಖರ, ಪ್ರಭು, ಅಯ್ಯಣ, ಸೇರಿದಂತೆ ವಿವಿಧ ಶಾಲೆಗಳ ಮುಖ್ಯ ಗುರುಗಳು, ಸಹ ಶಿಕ್ಷಕರು ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಮಹೇಶಕುಮಾರ್ ಸಿಂಗೆ ನಿರೂಪಿಸಿ ವಂದಿಸಿದರು.

**ಭಾವೈಕ್ಯ ಬೆಳೆಸುವುದು ಸೌಹಾರ್ದತೆ ಮೂಡಿಸುವುದು ಇದರ ಮೂಲ ಉದ್ದೇಶ**

ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ, ಭಾವೈಕ್ಯ ಬೆಳೆಸುವುದು ಹಾಗೂ ಸೌಹಾರ್ದತೆ ಮೂಡಿಸುವುದು ಇದರ ಮೂಲ ಉದ್ದೇಶವಾಗಿದೆ. ಜಾತಿ, ಧರ್ಮ ಬೇರೆ ಇದ್ದರೂ ನಾವೆಲ್ಲರೂ ಒಂದು ಎನ್ನುವ ಅರಿವು ಮೂಡಿಸಲಿದೆ. ಮಕ್ಕಳು ತಮ್ಮ ತಮ್ಮಲ್ಲೇ ಶಾಲೆ, ಪಾಠ ಪ್ರವಚನ ವಿನಿಯಮ ಮಾಡಿಕೊಳ್ಳಲಿದ್ದಾರೆ. ಇಂತಹ ಕಾರ್ಯಕ್ರಮಗಳ ಮೂಲಕ ಮಗು ಸ್ವಯಂ ಆಗಿ ಇನ್ನಷ್ಟು ವಿಷಯಗಳನ್ನು ಅರಿತುಕೊಳ್ಳಲು ಸಾಧ್ಯವಾಗಲಿದೆ.

**ಪ್ರೇಮಿಳಾ ರೆಡ್ಡಿ**

# ಪಂಚ ಗ್ಯಾರಂಟಿಗಳ ನಾಡ ದೊರೆ: ರಂಗನಾಥ್ ಬಾಗ್ಲಿ

ವರದಿ: ಡಿ.ಕೆ ದೇವಿಂದ್ರ ಯಾದಗಿರಿ.

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಅರಸು ನಂತರ ಅತ್ಯಂತ ದೀರ್ಘಾವಧಿಯ ಮುಖ್ಯಮಂತ್ರಿಯಾಗಿ ಇತಿಹಾಸದ ಪುಟ ಸೇರಿದ್ದಾರೆ. ಇದು ನಾಡಿನ ಅಹಿಂದ ಸಮುದಾಯಗಳಿಗೆ ಅತ್ಯಂತ ಖುಷಿಯ ವಿಚಾರ, ನಾಡು ಕಂಡ ಅಪರೂಪದ ಜನನಾಯಕರಾಗಿದ್ದ ದೇವರಾಜ ಅರಸರು 7 ವರ್ಷ 7 ತಿಂಗಳು 23 ದಿನಗಳ ಸುದೀರ್ಘಾವಧಿಯ ಆಡಳಿತದಲ್ಲಿ



ಭೂ ಸುಧಾರಣೆ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಮೂಲಕ ನಾಡಿನ ಕಟ್ಟಾಕಡೆಯ ವ್ಯಕ್ತಿಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ, ಆ ಕಾರಣದಿಂದಲೇ ಅರಸು ಅವರನ್ನು ಇಡೀ ಕರ್ನಾಟಕದ ಜನತೆ ನೆನೆಯುತ್ತಾರೆ, ಈದೀಗ ಸಿದ್ದರಾಮಯ್ಯನವರು ಅರಸರು ಆಳಿದ ದೀರ್ಘಾವಧಿಯ ದಾಖಲೆ ಸರಿಗಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಪ್ಪಟ ಅಭಿಮಾನಿ ರಂಗನಾಥ್ ಬಾಗ್ಲಿ ಹೇಳಿದರು. ಸಿದ್ದರಾಮಯ್ಯನವರು ಪ್ರಥಮ ಬಾರಿ ಹಣಕಾಸು ಮಂತ್ರಿಯಾಗಿದ್ದಾಗ ಬಜೆಟ್ ಮಂಡನೆಗೆ ಸಿದ್ಧವಾಗಿರುವಾಗ ಸಿದ್ದರಾಮಯ್ಯನಿಗೆ ಸರಿಯಾಗಿ ಕುರಿಗಳ ಲೆಕ್ಕ ಹಾಕೋಕೆ ಬರೋದಿಲ್ಲ ಇನ್ನೂ ರಾಜ್ಯದ ಬಜೆಟ್ ಲೆಕ್ಕ ಹಾಕೋಕಾಗುತ್ತಾ..ಎಂದು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಗೇಲಿ ಮಾಡುತ್ತಿದ್ದರಂತೆ. ಇಂದಿನ ದಾಖಲೆ ಅಂತವರನ್ನು ಮುಟ್ಟಿನೋಡಿಕೊಳ್ಳುವಂತೆ ಮಾಡಿದೆ. ಸಿದ್ದರಾಮಯ್ಯನವರು ಅಷ್ಟೇ ಅರಸುರಂತೆ ತಮಗೆ ಸಿಕ್ಕ ಅವಕಾಶಗಳಲ್ಲಿ ಜನಪರತೆಗೆ ಹೊರತುಪಡಿಸಿ ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದ ಉದಾಹರಣೆಯೇ ಇಲ್ಲ. ಸದಾ ಅಹಿಂದ ಸಮುದಾಯಗಳ ಏಳಿಗೆಗೆ ಶ್ರಮಿಸುತ್ತಿದ್ದಾರೆ, ಮೊದಲ ಅವಧಿಯಲ್ಲಿ ಅನ್ನಭಾಗ್ಯ ಯೋಜನೆ ಹಾದಿಯಾಗಿ ಅನೇಕ ಯೋಜನೆಗಳನ್ನು ನೀಡಿ ಜನಮಾನಸದಲ್ಲಿ ಸ್ಥಾನ ಪಡೆದು ಮತ್ತೊಮ್ಮೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕು ಎಂದು ನಾಡ ಜನತೆ ಬಯಸಿತು. ಜನತೆಯ ಬಯಕೆಯಂತೆ ಸಿದ್ದರಾಮಯ್ಯನವರಿಗೆ ಈ ಅವಧಿಯಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಅವಕಾಶವೂ ದೊರೆಯಿತು. ಈ ಅವಧಿಯಲ್ಲಿಯೂ ಪಂಚ ಗ್ಯಾರಂಟಿಗಳನ್ನು ನೀಡಿ ಸೈ ಎನಿಸಿಕೊಂಡಿದ್ದಾರೆ ಎಂದು ಪತ್ರಿಕೆಗೆ ತಿಳಿಸಿದ್ದರು.

# ಈಜುಕೊಳದಲ್ಲಿ ಮೊಜು,ಮಸ್ತಿ ಘಟನೆ: ಶಾಸಕ ತುನ್ನೂರ ಆಕ್ರೋಶ

• **ಮಲ್ಲಮ್ಮ ನುಡಿ ವಾರ್ತೆಯಾದಗಿರಿ:**



ಜಿಲ್ಲಾ ಕ್ರೀಡಾಂಗಣದ ಈಜುಕೊಳದಲ್ಲಿ ಆರ್ ಡಿಪಿಆರ್ ಇಲಾಖೆಯ ಇಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಯವರು ಶುಕ್ರವಾರ ರಾತ್ರಿ ಕಾನೂನು ಬಾಹಿರವಾಗಿ ನಡೆಸಿರುವ ಡಿನ್ನರ್ ಪಾರ್ಟಿ ಮತ್ತು ಸಂಗೀತ ಕಲಾವಿದರನ್ನು ಅವಮಾನಿಸಿ ಅವರು ತಂದಿದ್ದ ಸಂಗೀತ ಪರಿಕರಗಳನ್ನು ಒಡೆದು ಹಾಕಿದ ಘಟನೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿರುವ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಕೂಡಲೇ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆಯೇ ಜಿಲ್ಲಾಧಿಕಾರಿ ಹರ್ಷಲ್ ಬೋಯರ್ ಅವರಿಗೆ ಕಡಕ್ ಸೂಚನೆ ನೀಡಿದ್ದಾರೆ. ಈ ಕುರಿತು ಮಾಧ್ಯಮಗಳಲ್ಲಿ ಬಂದ ವರದಿ ಗಮನಿಸಿದ ಶಾಸಕರು, ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿ ಕಚೇರಿ ಭೇಟಿ, ಅಲ್ಲಿ ಡಿಸಿ ಬೋಯರ್ ಅವರಿಂದ ಈ ಘಟನೆ ಬಗ್ಗೆ ಮಾಹಿತಿ ಪಡೆದು, ಇದು ಪ್ರಜ್ಞಾವಂತರು ತಲೆ ತಗ್ಗಿಸುವ ಕೆಲಸ ಆಗಿದೆ. ಇದರಿಂದ ಗಿರಿಜಿಲ್ಲೆ ಮರ್ಯಾದೆ ರಾಜ್ಯದ ಎಲ್ಲಡೆ ಹರಾಜು ಆಗಿದೆ. ಇದು ಕ್ಷಮಿಸುವಂತ ತಪ್ಪಲ್ಲ. ಯಾರೇ ಇರಲಿ, ಮೂಲಾಜಿ ಇಲ್ಲದೇ ಕ್ರಮ ಆಗಬೇಕೆಂದು ಡಿಸಿ ಅವರನ್ನು ಶಾಸಕರು ಕಡಕ್ ಆಗಿಯೇ ಹೇಳಿದ್ದಾರೆ.

ಪಾರ್ಟಿ, ಮೊಜು,ಮಸ್ತಿ ಬೇರೆ ಎಲ್ಲಿಯಾದರೂ ಮಾಡಿಕೊಳ್ಳಲಿ. ಆದರೇ ಸರ್ಕಾರದ ಜಾಗ, ಅದರಲ್ಲೂ ಕ್ರೀಡಾಪಟುಗಳು ವಾಸ ಮಾಡಿ ಆಡುವ ಜಾಗದಲ್ಲಿ ಹೀಗೆ ತಡ ರಾತ್ರಿಯವರೆಗೂ ರಾಜಾರೋಷವಾಗಿ ಪಾರ್ಟಿ ಮಾಡುತ್ತಾರೆಂದರೇ ಆ ಎಲ್ಲ ಅಧಿಕಾರಿಗಳಿಗೆ ಕನಿಷ್ಠ ಜ್ಞಾನವೂ ಇಲ್ಲವೇ ಎಂದು ಶಾಸಕರು ಡಿಸಿ ಅವರ ಮುಂದೆ ಅಸಮಾಧಾನ ವ್ಯಕ್ತಪಡಿಸಿದರು.

ಇದನ್ನು ಜಿಲ್ಲಾಡಳಿತ ಗಂಭಿರವಾಗಿ ಪರಿಗಣಿಸಿದ್ದು, ಸಹಾಯಕ ಆಯುಕ್ತರ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿ ಕೂಡಲೇ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಡಿಸಿ ಬೊಯರ್ ಶಾಸಕರಿಗೆ ಭರವಸೆ ನೀಡಿದರು.

# ಜ.16 ರಂದು ಪಂಚ ಗ್ಯಾರಂಟಿ ಉತ್ಸವ : ಎಸ್.ಆರ್.ಪಾಟೀಲ್

• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ಪ್ರಗತಿ ಸೇರಿದಂತೆ ರಾಜ್ಯದಲ್ಲಿನ ಪ್ರತಿ ಕುಟುಂಬದಲ್ಲೂ ಆರ್ಥಿಕ ಸುಧಾರಣೆಗಳನ್ನು ತಂದಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಅತ್ಯಂತ ಯಶಸ್ವಿಯಾಗಿದ್ದು, ಈ ಕುರಿತು ಜಿಲ್ಲೆಯಲ್ಲಿ ಜನವರಿ 16 ರಂದು ಪಂಚ ಗ್ಯಾರಂಟಿ ಉತ್ಸವವನ್ನು ಆಯೋಜಿಸಲಾಗುವುದು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ್ (ಬ್ಯಾಡಗಿ) ತಿಳಿಸಿದರು.ಅವರು ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ, ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಹಾಗೂ ಜಿಲ್ಲಾ ಪಂಚ ಗ್ಯಾರಂಟಿ ಉತ್ಸವ/ ಕಾರ್ಯಗಾರದ ಕುರಿತ ಚರ್ಚೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಯ ಉದ್ದೇಶದಿಂದ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದಲ್ಲಿನ ಪ್ರತೀ ಕುಟುಂಬಕ್ಕೂ ನೆರವಾಗುವುದರ ಜೊತೆಗೆ ರಾಜ್ಯದ ಆರ್ಥಿಕ ಪ್ರಗತಿಗೂ ಕಾರಣವಾಗಿವೆ. ಶಕ್ತಿ ಯೋಜನೆಯು ರಾಜ್ಯದ ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕವಾಗಿದೆ, ಗೃಹಲಕ್ಷ್ಮೀ ಯೋಜನೆಯಿಂದ ಕುಟುಂಬಗಳಲ್ಲಿ ಸೌಹಾರ್ದತೆ ಮೂಡಿದೆ. ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಯೋಜನೆಯ ಯಶಸ್ಸನ್ನು ಆಚರಿಸಲು ಜಿಲ್ಲಾಮಟ್ಟದ ಪಂಚ ಗ್ಯಾರಂಟಿ ಉತ್ಸವವನ್ನು ಆಯೋಜಿಸಲಾಗುತ್ತಿದ್ದು, ಈ ಕುರಿತಂತೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ತಿಳಿಸಿದರು.

# ವಿದ್ಯಾರ್ಥಿಯ ಸಾಧನೆಯಲ್ಲಿ ಗುರುವಿನ ಯಶವಿದೆ: ಡಿ.ಎಸ್ ಕರಡಕಲ್



> **ಸಭೆಯಲ್ಲಿ ಹಲವು ಪಾಲಕರ ಅನಿಸಿಕೆಯಂತೆ ಶಾಲೆಯಲ್ಲಿ ಸಮಯ ಪಾಲನೆ ಇಲ್ಲ, ತರಗತಿಗಳು ಸರಿಯಾಗಿ ನಡೆಯುತ್ತಿಲ್ಲವೆಂಬ ಆರೋಪವಿದೆ. ಮಕ್ಕಳಿಗೆ ಮೂಲಭೂತ ಸೌಕರ್ಯ ಜೊತೆಗೆ ಕಟ್ಟುನಿಟ್ಟಾಗಿ ತರಗತಿಗಳು ನಡೆಯುವಂತೆ ನೋಡಿಕೊಂಡು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಒತ್ತುಕೊಡಬೇಕಾಗಿದೆ.**
>
> **ರಾಘು ಮಾಸ್ತರ ಪಾಲಕರು.**

• **ಮಲ್ಲಮ್ಮ ನುಡಿ ವಾರ್ತೆ,ಕೆಂಭಾವಿ:**

ಮಗುವಿಗೆ ತಾಯಿಯೇ ಮೊದಲ ಗುರು ಮಗುವಿನ ಸಂಸ್ಕಾರ, ಆಚಾರವಿಚಾರಗಳನ್ನು ಒಳಗೊಂಡಂತೆ ಸಮಾಜಮುಖಿ ವ್ಯಕ್ತಿತ್ವ ನಿರ್ಮಾಣದಲ್ಲಿ ಪಾಲಕರ ಹಾಗೂ ಕುಟುಂಬದ ಪಾತ್ರವು ಅಷ್ಟೆ ಪ್ರಮುಖವಾದ್ದು ಎಂದು ಚಿತ್ರಕಲಾ ಶಿಕ್ಷಕ ದೇವಿಂದ್ರಪ್ಪ ಎಸ್ ಕರಡಕಲ್ ಹೇಳಿದರು.

ಪಟ್ಟಣದ ಮೋರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡ ಪಾಲಕರ ಸಭೆಯಲ್ಲಿ ಮಾತನಾಡಿದ ಅವರು ಮಕ್ಕಳು ಶಾಲೆಗೆ ಬಂದ ನಂತರ ಮಗುವಿನ ಶೈಕ್ಷಣಿಕ ಗುಣಮಟ್ಟ ಮತ್ತು ಪ್ರತಿಭೆಯನ್ನು ಅರಿತು ಮಕ್ಕಳಲ್ಲಿ ಮಕ್ಕಳಾಗಿ ಸ್ನೇಹಮಯಿಯಾಗಿ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಸಮರ್ಪಣಾ ಮನೋಭಾವದಿಂದ ಕರ್ತವ್ಯ ನಿರ್ವಹಿಸಬೇಕಾದ್ದು ಶಿಕ್ಷಕನ ಕರ್ತವ್ಯವಾಗಿದೆ ಎಂದ ಅವರು ಕೌಟುಂಬಿಕ ವಾತವರಣವು ಮಗುವಿನ ಅಧ್ಯಯನಕ್ಕೆ ಪೂರಕವಾಗಿರಬೇಕು. ವಿದ್ಯಾರ್ಥಿಯ ಸಾಧನೆಯಲ್ಲಿ ಗುರುವಿನ ಯಶವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾವಿತ್ರಿಬಾಯಿ ಪುಲೆಯವರ ಜಯಂತಿಯ ಅಂಗವಾಗಿ ಅವರ ಭಾವ ಚಿತ್ರಕ್ಕೆ ಪ್ರಾಂಶುಪಾಲ ಅಪ್ಪು ರಾಠೋಡ ಪೂಜೆ ಸಲ್ಲಿಸಿ ಫುಲೆ ಅವರ ಶೈಕ್ಷಣಿಕ ಹೋರಾಟ ಸಮಾನತೆ, ನ್ಯಾಯ ಮತ್ತು ಸಹಾನುಭೂತಿ ಕುರಿತು ತಿಳಿಸಿದರು. ಸಮಾರಂಭದಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಶಿಕ್ಷಕ ಸಿಬ್ಬಂದಿ ಶಾಂತಲಿಂಗ ಪಾಟೀಲ್, ಬಿಬಿ ಬಿರಾದಾರ, ರಮೇಶ ಯಾಳಗಿ, ಮಲ್ಲನಗೌಡ ಪೊಲೀಸ್ ಪಾಟೀಲ, ವಿಜಯಕುಮಾರ ರಡ್ಡಿ ಯಾಳಗಿ, ಮೌನೇಶ ಬಡಿಗೇರ, ಇಸ್ಮಾಯಿಲ್ ಮಕಾಂದಾರ ಸೇರಿದಂತೆ ಪಾಲಕರು ಹಾಗೂ ಮಕ್ಕಳು ಉಪಸ್ಥಿತರಿದ್ದರು.

# ಸಿದ್ದರಾಮಯ್ಯನವರ ಐತಿಹಾಸಿಕ ಆಡಳಿತದ ಸಂಭ್ರಮ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಸುದೀರ್ಘ ಕಾಲ ಮುಖ್ಯಮಂತ್ರಿಯಾಗಿ ಯಶಸ್ವಿ ಆಡಳಿತ ನೀಡುತ್ತಿರುವ ಸಿದ್ದರಾಮಯ್ಯನವರ ಸಾಧನೆಯನ್ನು ಸಂಭ್ರಮಿಸಲು ಯಾದಗಿರಿ ಮತಕ್ಷೇತ್ರದ ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು ಅವರ ವತಿಯಿಂದ ನಗರದ ಶಾಸಕರ ಜನಸಂಪರ್ಕ ಕಛೇರಿಯಲ್ಲಿ ಅದ್ದೂರಿ ಸಮಾರಂಭ ಹಾಗೂ ಔತಣಕೂಟವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಐತಿಹಾಸಿಕ ಕ್ಷಣದ ಆಚರಣೆ ರಾಜ್ಯದ ಇತಿಹಾಸದಲ್ಲಿ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಜನಪರ ಆಡಳಿತ ನೀಡುತ್ತಿರುವ ಸಿದ್ದರಾಮಯ್ಯನವರ ಜನಪ್ರಿಯತೆಯನ್ನು ಈ ಕಾರ್ಯಕ್ರಮದ



ಮೂಲಕ ಹಂಚಿಕೊಳ್ಳಲಾಯಿತು. ಒಗ್ಗಟ್ಟಿನ ಪ್ರದರ್ಶನ ಶಾಸಕರ ಜನಸಂಪರ್ಕ ಕಛೇರಿಯು ಕಾಂಗ್ರೆಸ್ ಕಾರ್ಯಕರ್ತರ ಹರ್ಷೋದ್ಗಾರ ಹಾಗೂ ಅಭಿಮಾನಿಗಳಿಂದ ತುಂಬಿ ತುಳುಕುತ್ತಿತ್ತು. ವಿಶೇಷ ಔತಣಕೂಟ ಈ ಐತಿಹಾಸಿಕ ಮೈಲಿಗಲ್ಲನ್ನು ಸ್ಮರಿಸುವ ನಿಟ್ಟಿನಲ್ಲಿ ಶಾಸಕರು ಪಕ್ಷದ ಮುಖಂಡರಿಗೆ ಹಾಗೂ ಅಭಿಮಾನಿಗಳಿಗೆ ಪ್ರೀತಿಯ ಭೋಜನದ ವ್ಯವಸ್ಥೆ ಮಾಡಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು, ನಿಷ್ಠಾವಂತ ಕಾರ್ಯಕರ್ತರು ಹಾಗೂ ಅಸಂಖ್ಯಾತ ಅಭಿಮಾನಿಗಳು ಭಾಗವಹಿಸಿ ಸಿದ್ದರಾಮಯ್ಯನವರ ಆಡಳಿತ ವೈಖರಿಯನ್ನು ಶ್ಲಾಘಿಸಿದರು. ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು ಅವರು ಮಾತನಾಡಿ, ನಮ್ಮ ನೆಚ್ಚಿನ ನಾಯಕರು ರಾಜ್ಯಕ್ಕೆ ನೀಡುತ್ತಿರುವ ಕೊಡುಗೆ ಸ್ಮರಣೀಯ, ಎಂದು ಹರ್ಷ ವ್ಯಕ್ತಪಡಿಸಿದರು.



**ಮಲ್ಲಮ್ಮ ನುಡಿ ವಾರ್ತೆ**

**ಬೀದರ್:** ವಿಶ್ವಾರಾಧ್ಯ ಆರಕ್ಷಕ ಉಪ ನಿರೀಕ್ಷಕರು ಧನ್ನೂರ ಅವರನ್ನು ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆಯ ಕ್ಯಾಲೆಂಡರ್ ವಿತರಿಸಲಾಯಿತು,

## :CITATION:

**IN THE COURT OF THE PRL, CIVIL JUDGE AND JMFC., AT HUMNABAD.**
**CRL. MISC. No.2658/2025.**

**Petitioners:**

1. **Halima Bee W/o late. Jaleel Miyan, D/o late. Lal Ahmed** Sab, Age : 72-yrs. Occu: House hold.
2. **Ibrahim Sab S/o late. Lal Ahmed Sab,** Age: 70yrs. Occu: Coolie.
3. **Gousiya Bee W/o Ibrahim Sab.** Age: 65-yrs. Occ: House hold. All R/o Village Dubalgundi. Tq. Humnabad.

**Respondent:**

The Registrar of Birth and Death through The Tahasildar Humnabad. Dist. Humnabad.

**Sub:-** Petition U/Sec. 13(3) of Birth and Death Registration Act-1969 Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Mother of petitioner No. 1 and 2 and Mother in law of petitioner No.3 by namely LATE. HASHMATH BEE W/O LATE. LAL AHMED SAB, she was died on 25.05.2014 at Village Dubalgundi, Tq.Humnabad Dist. Bidar.

The petitioners claiming the Death Certificate of said for transfer of property and other official purpose and home record. Therefore, it is hereby proclaimed that if any persons have got any objection in this regard, may approach to this Court on 28.02.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 30-12-2025.**
**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad.**

# ನಗನೂರು ಕರೆಪ್ಪ ತಾತನವರ 15ನೇ ವರ್ಷದ ಪುಣ್ಯಾರಾಧನೆ; ದರ್ಶನಾಪುರ ಅಭಿಮತ ನಾಡಿಗೆ ಮಠ–ಮಾನ್ಯಗಳ ಕೊಡುಗೆ ಅಪಾರ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:**



**ಸಾಧಕರಿಗೆ ಕರೆಪ್ಪ ತಾತಾಶ್ರೀ ಪ್ರಶಸ್ತಿ:**

**ವಿವಿಧ ಕ್ಷೇತ್ರಗಳ ಸಾಧಕರಾದ ಬಸವರಾಜ ಭಂಟನೂರ (ಸಂಗೀತ), ಸಂಜೀವರಾವ್ ಕುಲಕರ್ಣಿ (ಮಾಧ್ಯಮ), ಡಾ. ಸಂಗನಗೌಡ ಹಿರೇಗೌಡ್ರ (ಸಾಹಿತ್ಯ), ಭೀಮನಗೌಡ ಗುರುನಾಥರಡ್ಡಿ ಗೂಗಲ್ (ಸಮಾಜ ಸೇವೆ), ಸೋಮನಾಥ ನಾಯ್ಕೋಡಿ ಮಲ್ಲಾ (ಬಿ.) (ಸಮಾಜಸೇವೆ), ಮಾಳಪ್ಪ ಬಿ. ಸುಂಕದ (ಸಹಕಾರ), ನರಸಪ್ಪ ಎಸ್. ಹುಲಕಲ್ (ಕೃಷಿ) ಅವರಿಗೆ ಕಾರ್ಯಕ್ರಮದಲ್ಲಿ ಲಿಂ. ಕರೆಪ್ಪ ತಾತಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.**

ಜಿಲ್ಲೆಯ ಪುಣ್ಯಕ್ಷೇತ್ರಗಳ ಪೈಕಿ ನಗನೂರ ಗ್ರಾಮವು ಒಂದು. ನಾಡಿನಾದ್ಯಂತ ಮಠ ಮಾನ್ಯಗಳ ಕೊಡುಗೆ ಅಪಾರವಾದದ್ದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ಪಟ್ಟಣ ಸಮೀಪದ ನಗನೂರ ಗ್ರಾಮದ ನಗರೇಶ್ವರ ದೇವಸ್ಥಾನದಲ್ಲಿ ನಡೆದ ಲಿಂ. ಕರೆಪ್ಪ ತಾತನವರ 15ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ಧರ್ಮಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮಠಗಳು ಹಲವು ಕಾರ್ಯಗಳನ್ನು ಮಾಡುತ್ತಿವೆ. ಸಮಾಜ ಉದ್ಧಾರಕ್ಕೆ ಮುಖ್ಯವಾಗಿ ಎಲ್ಲರೂ ಶಿಕ್ಷಣ ಪಡೆಯುವುದು ಅತೀ ಅವಶ್ಯ. ಈ ನಿಟ್ಟಿನಲ್ಲಿ ಮಠಗಳು ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಮೂಲಕ ಹಲವರನ್ನು ವಿದ್ಯಾವಂತರನ್ನಾಗಿ ಮಾಡುತ್ತಿವೆ ಎಂದ ಅವರು ಗ್ರಾಮದ ಸಮಗ್ರ ಅಭಿವೃದ್ಧಿ ಕಾರ್ಯಗಳಿಗೆ ಈಗಾಗಲೇ ಅನುದಾನ ಒದಗಿಸಲಾಗಿದೆ. ಪವಾಡ ಪುರುಷ ಲಿಂ. ಕರೆಪ್ಪ ತಾತನವರ ಮಠಕ್ಕೆ ಸಮುದಾಯ ಭವನ ನಿರ್ಮಿಸಲು ಅಗತ್ಯ ಸ್ಥಳ ಒದಗಿಸಿದರೆ ಮಾರ್ಚ್ ತಿಂಗಳ ಒಳಗೆ ಅನುದಾನ ಒದಗಿಸುವುದಾಗಿ ಭರವಸೆ ನೀಡಿದರು.

ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪೂರ ಮಾತನಾಡಿ, ಸಮಾಜದಲ್ಲಿ ಪ್ರತಿ ವ್ಯಕ್ತಿ ಶಿಕ್ಷಣ ಸಂಸ್ಕಾರ ಪಡೆದಾಗ ಮಾತ್ರ ಸಮಾಜ ಮೇಲೆತ್ತರಕ್ಕೆ ಏರಲು ಸಾಧ್ಯ ಎಂದು ಹೇಳಿದರು. ಜಿಪಂ ಮಾಜಿ ಉಪಾಧ್ಯಕ್ಷ ಶಂಕ್ರಣ್ಣ ವಣಿಕ್ಯಾಳ ಪ್ರಾಸ್ತಾವಿಕ ಮಾತನಾಡಿದರು. ಶ್ರೀ ನಗರೇಶ್ವರ ದೇವಸ್ಥಾನದ ಪಟ್ಟಾಧಿಕಾರಿಗಳಾದ ಶ್ರೀ ಖಂಡಪ್ಪ ತಾತ, ಶ್ರೀ ದೊಡ್ಡಪ್ಪ ತಾತ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಅಭಿನವ ಸಿದ್ಧರತ್ನ ಮದಗೊಂಡೇಶ್ವರ ಮಹಾರಾಜರು, ಶ್ರೀ ಸೂಗೂರೇಶ್ವರ ಶಿವಾಚಾರ್ಯರು, ಶ್ರೀ ಶರಣಪ್ಪ ಶರಣರು, ಶ್ರೀ ಚೆನ್ನಬಸವ ಶಿವಾಚಾರ್ಯರು, ಶ್ರೀ ಗಜಾನನ ಮಹಾರಾಜರು, ಶ್ರೀ ಮಹಾಂತ ಸ್ವಾಮಿಗಳು, ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಬಸಯ್ಯಸ್ವಾಮಿ ಹಿರೇಮಠ, ಶ್ರೀ ಶರಣು ಗದ್ದುಗೆ, ಬೀರಪ್ಪ ಪೂಜಾರಿ, ಸಿದ್ದಪ್ಪ ಪೂಜಾರಿ, ಶ್ರೀ ಕೆಂಚಪ್ಪ ಪೂಜಾರಿ, ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಅಮೀನರೆಡ್ಡಿ ಪಾಟೀಲ ಯಾಳಗಿ, ಬಸನಗೌಡ ಪಾಟೀಲ ಯಡಿಯಾಪೂರ, ರಾಜಶೇಖರ ಪಾಟೀಲ ವಜ್ಜಲ, ಡಾ. ಭೀಮಣ್ಣ ಮೇಟಿ, ಬಸವರಾಜ ವಿಭೂತಿಹಳ್ಳಿ, ಡಾ. ಚಂದ್ರಶೇಖರ ಸುಬೇದಾರ, ವಿನೋದ ಪಾಟೀಲ, ಬಸವರಾಜ ಪಾಟೀಲ ಚಿಂಚೋಳಿ, ಸಿದ್ದಣ್ಣ ಸಾಹು ಗೂಗಲ್, ಗುರಪ್ಪಗೌಡ ಪೊಲೀಸ್ ಪಾಟೀಲ, ರಾಜಶೇಖರ ಸಾಹು ಗೂಗಲ್, ಬೋಜಪ್ಪಗೌಡ ಪೊಲೀಸ್ ಪಾಟೀಲ, ಹಳ್ಳೆಪ್ಪ ಹವಲ್ದಾರ, ಶಾಂತಣ್ಣ ಚೆನ್ನೂರ, ಭೂ ದಾನಿ ಪ್ರಭುಗೌಡ ಜಿ. ಗೂಗಲ, ಚನ್ನಾರೆಡ್ಡಿ ದೇಸಾಯಿ, ಗ್ರಾಪಂ ಅಧ್ಯಕ್ಷ ಮಹಾಂತಗೌಡ ಪೊಲೀಸ್ ಪಾಟೀಲ, ಪಿಕೆಪಿಎಸ್ ಅಧ್ಯಕ್ಷೆ ಶರಣಮ್ಮ ಮಲ್ಲಣ್ಣದೇಸಾಯಿ, ಗ್ರಾಪಂ ಸದಸ್ಯರು ಸೇರಿದಂತೆ ನಗನೂರ, ಖಾನಾಪೂರ ಹಾಗೂ ಸುತ್ತಲಿನ ಗ್ರಾಮದ ಭಕ್ತರು ಭಾಗವಹಿಸಿದ್ದರು. ಖ್ಯಾತ ಸಂಗೀತ ಕಲಾವಿದ ಬಸವರಾಜ ಭಂಟನೂರ, ತಬಲವಾದಕ ಯಮನೇಶ ಯಾಳಗಿ, ಅಮರೇಶ ನಗನೂರ ಅವರು ಸಂಗೀತ ಸೇವೆ ನೀಡಿದರು. ಶಿಕ್ಷಕ ಸಿದ್ದನಗೌಡ ಗೂಗಲ್ ನಿರೂಪಿಸಿದರು. ಶರಣಕುಮಾರ ಆಲ್ಯಾಳ ಸ್ವಾಗತಿಸಿದರು. ಶಿವರಾಜ ಸಾಹು ಬೂದೂರ ವಂದಿಸಿದರು. ಕಾರ್ಯಕ್ರಮದಲ್ಲಿ ಭಕ್ತರು ಮಹಾಪ್ರಸಾದ ಸ್ವೀಕರಿಸಿದರು.

> ನಗನೂರ ಗ್ರಾಮದ ಸರ್ವ ಸಮುದಾಯದವರು ಪ್ರತಿಯೊಂದು ಧಾರ್ಮಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡುವ ಮೂಲಕ ಮಾದರಿಯಾಗಿದ್ದಾರೆ.
>
> **ಅಮೀನರೆಡ್ಡಿ ಪಾಟೀಲ ಯಾಳಗಿ**
> **ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ**

# ವೆನೆಜುವೆಲಾದ ಅತಿಕ್ರಮಣ ನಿಲುವು ಖಂಡಿಸಿ ಟ್ರಂಪ್ ಪ್ರತಿಕೃತಿ ದಹಿಸಿ ಪ್ರತಿಭಟನೆ




• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ವೆನೆಜುವೆಲಾದ ಮೇಲೆ ಅಮೇರಿಕ ಸಾಮ್ರಾಜ್ಯಶಾಹಿ ಆಡಳಿತ ಖಂಡಿಸಿ ಸಿಪಿಐ(ಎಂಎಲ್) ಮುಖಂಡರು ನಗರದ ಅಂಬೇಡ್ಕರ್ ವೃತ್ತದಲ್ಲಿ ಅಮೆರಿಕ ಅಧ್ಯಕ್ಷರು ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಲಾಯಿತು.

ವೆನೆಜುವೆಲಾದವಿರುದ್ಧ ದುರಾಕ್ರಮಣ ಮತ್ತು ಅಮೆರಿಕದ ಸಶಸ್ತ್ರ ಪಡೆಗಳು ಅದರ ಅಧ್ಯಕ್ಷರು ಮತ್ತು ಅವರ ಪತ್ನಿಯನ್ನು ಅಪಹರಿಸಿದ್ದಕ್ಕೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಅಂಜುಬುರುಕತನದ ಪ್ರತಿಕ್ರಿಯೆ ಭಾರತವು ಇತರ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವದ ರಕ್ಷಣೆಯ ಬಗ್ಗೆ ದೀರ್ಘಕಾಲದಿಂದ ತಳೆದುಕೊಂಡು ಬಂದಿರುವ ನಿಲುವಿಗೆ ತಕ್ಕುದಾಗಿಲ್ಲ ಎಂದು ಸಿಪಿಐ(ಎಂ) ಸಿಪಿಐ(ಎಂಎಲ್) ಆಕ್ರೋಶ ವ್ಯಕ್ತಪಡಿಸಿವೆ.ವಿದೇಶಾಂಗಸಚಿವಾಲಯಬಿಡುಗಡೆ ಮಾಡಿರುವ ಹೇಳಿಕೆಯು 'ವೆನೆಜ್ಯುವೆಲಾದ ಬೆಳವಣಿಗೆಗಳ ಬಗ್ಗೆ 'ಆಳವಾದ ಕಳವಳ'ವನ್ನು ಮಾತ್ರವ್ಯಕ್ತಪಡಿಸುತ್ತದೆ ಮತ್ತು 'ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಖಚಿತಪಡಿಸಲು ಸಂವಾದ'ಕ್ಕೆ ಕರೆ ನೀಡುತ್ತದೆ. ವಿಶ್ವಸಂಸ್ಥೆಯ ಚಾರ್ಟರ್ ಮತ್ತು ಅಂತರರಾಷ್ಟ್ರೀಯ ಕಾನೂನಿನ ಸಂಪೂರ್ಣ ಉಲ್ಲಂಘನೆಯ ಬಗ್ಗೆ ಒಂದೇ ಒಂದು ಖಂಡನೆಯ ಪದವೂ ಇಲ್ಲ.ಯುನೈಟೆಡ್ ಅಮೇರಿಕಾದ ಕೆಲವು ಯುರೋಪಿಯನ್ ಮಿತ್ರರಾಷ್ಟ್ರಗಳೂ ಸಹ ಇಂತಹ ಮಾತುಗಳನ್ನು ಹೇಳಿವೆ ಎಂಬ ಸಂಗತಿಯತ್ತ ಅದು ಗಮನ ಸೆಳೆದಿದೆ.ಭಾರತದ ನಿಲುವು ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಂತಹ ಬ್ರಿಕ್ಸ್ ಪಾಲುದಾರರು ತೆಗೆದುಕೊಂಡ ನಿಲುವಿಗೆ ತದ್ವಿರುದ್ಧವಾಗಿದೆ, ಅವರು ಅಮೆರಿಕದ ಆಕ್ರಮಣವನ್ನು ನಿಸ್ಸಂದಿಗ್ಧವಾಗಿ ಮತ್ತು ಬಲವಾಗಿ ಖಂಡಿಸಿದ್ದಾರೆ ಮತ್ತು ಅಧ್ಯಕ್ಷ ಮಡುರೊ ಮತ್ತು ಅವರ ಪತ್ನಿಯನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಈ ಅಮೇರಿಕಾ ಪರ ನಿಲುವು ಮೋದಿ ಸರ್ಕಾರದ ಬಲಪಂಥೀಯ ಸಿದ್ಧಾಂತ ಮತ್ತು ಟ್ರಂಪ್ ಆಡಳಿತದೊಂದಿಗೆ ಅದು ಹೊಂದಿರುವ ರಣತಂತ್ರದ ಸಂಬಂಧಗಳಿಗೆ ಅನುಗುಣವಾಗಿದೆ.ಈ ನಿಲುವಿನಿಂದಾಗಿ ಭಾರತವು ಜಾಗತಿಕ ದಕ್ಷಿಣದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಯಾವುದೇ ದಾವೆಯನ್ನು ಕೈಬಿಟ್ಟಂತಾಗಿದೆ ಎಂದಿರುವ ಮೋದಿ ಸರ್ಕಾರ ಈ ಅಪಮಾನಕರ ನಿಲುವನ್ನು ಕೈಬಿಡಬೇಕು ಮತ್ತು ವೆನೆಜುವೆಲಾದಲ್ಲಿ ಅಮೆರಿಕದ ಆಕ್ರಮಣ ಹಾಗೂ ಕಾನೂನುಬಾಹಿರ ಕೃತ್ಯಗಳ ವಿರುದ್ಧ ಸ್ಪಷ್ಟವಾಗಿ ಮಾತನಾಡಬೇಕು ಎಂದು ಆಗ್ರಹಿಸಿದೆ.

ಈ ಸಂದರ್ಭದಲ್ಲಿ ಸಿಪಿಐಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಜಿ.ವಿರೇಶ.ಸಿಪಿಐ(ಎಂಎಲ್)ನ ಜಿಲ್ಲಾ ಮುಖಂಡ ಅಜೀಜ್ ಜಾಗೀರದಾರ್.ಡಿ.ಎಸ್.ಶರಣಬಸವ. ರಸೂಲ್ ಸವಾರಪ್ಪ.ಎಂ.ಡಿ.ಹನೀಫ್.ನಿಸಾರ್. ಜೀಲಾನಿ ಯರಗೇರಾ.ಭೀಮಯ್ಯ.ಮಾರಯ್ಯ. ಚೇನಿ.ಜಿಲಾನಿ ಪಾಷ.ಸುಜಾತ.ಮಹಾದೇವಿ. ಸೇರಿದಂತೆ ಎರಡು ಪಕ್ಷಗಳ ಮುಖಂಡರು ಭಾಗವಹಿಸಿದ್ದರು.

# ಜೆಡಿಎಸ್ ಸಾಮಾಜಿಕ ಜಾಲತಾಣ ಕಾರ್ಯಾಗಾರ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಜೆಡಿಎಸ್ ಪಕ್ಷದ ಬಲವರ್ಧನೆ ಹಾಗೂ ಚುನಾವಣೆಗೆ ಸಿದ್ಧತೆ ಕೈಗೊಳ್ಳುವ ನಿಟ್ಟಿನಲ್ಲಿ ದಿ.11 ರಂದು ದೇವದುರ್ಗ ನಲ್ಲಿ ಸಾಮಾಜಿಕ ಜಾಲತಾಣ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಾದಳ ಜಿಲ್ಲಾಧ್ಯಕ್ಷರಾದ ಎಂ. ವಿರೂಪಾಕ್ಷಿ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಮಾತ್ರ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದು, ಸ್ಥಳೀಯ ಚುನಾವಣೆಗಳಲ್ಲಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮತ್ತು ಪಕ್ಷದ ಅಭ್ಯರ್ಥಿಗಳ ಗೆಲವಿಗೆ ಸಿದ್ದತೆ ನಡೆಸಲು ಈ ಕಾರ್ಯಾಗಾರ ನಡೆಯಲಿದೆ ಎಂದರು.ಈ ಸ್ಥಳೀಯ ಚುನಾವಣೆಯಲ್ಲಿ ಯಾವುದೇ ಹೊಂದಾಣಿಕೆ ಇಲ್ಲ. ಸಾಮಾಜಿಕ ಜಾಲತಾಣ ರಾಜ್ಯ ಘಟಕ ಅಧ್ಯಕ್ಷರಾದ ಎಚ್.ಎನ್.ಚಂದನ್ ಅವರು ರಾಜ್ಯದಲ್ಲಿ ಪಕ್ಷ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.ಜಿಲ್ಲೆಯ ಪ್ರತಿಯೊಂದು ಬೂತ್ ಮಟ್ಟದವರೆಗೂ ಸಾಮಾಜಿಕ ಜಾಲತಾಣಗಳ ಮೂಲಕ ಮತದಾರರನ್ನು ತಲುಪಬೇಕು.ಪ್ರತಿ ಬೂತ್ ಮಟ್ಟದಲ್ಲಿ ಒಬ್ಬರನ್ನು ಬಿಎಲ್‌ಏಜೆಂಟ್ ನೇಮಕ ಮಾಡಲಾಗಿದೆ.ಜಿಲ್ಲಾದಂತ 180 ಬಿಎಲ್ ಒ ಗಳನ್ನು ನೇಮಕ ಮಾಡಲಾಗುವುದು. ಮತಗಳತನ ಮತ್ತು ಮರಣ ಹೊಂದಿದ ಹಾಗೂ ಎರಡು ಕಡೆ ಮತದಾನ ಹೊಂದಿದ ಮತದಾರನ್ನು ಗುರುತಿಸಿ ಮತದಾನ ಪರಿಷ್ಕರಣೆ ನಡೆಸುವ ಜವಾಬ್ದಾರಿ ಬಿಎಲ್ ಒ ಗಳನ್ನು ಮತಗಳ್ಳತನ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಇದಾಗಿದೆ.ನಿಖಿಲ್ ಕುಮಾರ ಸ್ವಾಮಿ ಯುವಕ ಘಟಕ ವತಿಯಿಂದ ಈ ಸಾಮಾಜಿಕ ಜಾಲತಾಣ ಕಾರ್ಯಾಗಾರ ಆಯೋಜಿಸಲಾಗಿದೆ. ಪಕ್ಷದ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.ಕಾರ್ಯಕರ್ತರು ಸೋಲಿನಿಂದ ಧೃತಿಗೆಡಬಾರದು. ಸೋಲು ಗೆಲುವು ಸಾಮಾನ್ಯ, ಕಾರ್ಯಕರ್ತರು ಸದಾ ಜಾಗರೂಕರಾಗಿರಬೇಕು ಎಂದರು.ಸಾಮಾಜಿಕ ಜಾಲತಾಣ ಪ್ರಭಾವಿ ಮಾಧ್ಯಮ.ಕಾರ್ಯಕರ್ತರು ಸಂಘಟಿತರಾಗಿ ಸಾಮಾಜಿಕ ಜಾಲತಾಣ ಬಳಸಿಕೊಂಡು ಮತದಾರರ ಮನೆ ಮನೆಯನ್ನು ತಲುಪಬೇಕು. ರಾಜ್ಯದ ಪಕ್ಷದ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು, ಜಿಲ್ಲೆಯ ಪಕ್ಷದ ಎಲ್ಲ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದರು. ಈ ಸಂದರ್ಭದಲ್ಲಿ ನರಸಿಂಹ ನಾಯಕ,ಶಿವಶಂಕರ ವಕೀಲರು, ಅಮರೇಶ ಪಾಟೀಲ್, ಡಿ ಎಂ ನಾಗರಾಜಗೌಡ, ಲಕ್ಷ್ಮಿಪತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಚಳಿ ಬಿಡಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ




ಯಾದಗಿರಿ: ವಿವಿಧ ಇಲಾಖೆಗಳ ವಸತಿ ನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ನೀಡುವ ಮೂಲಕ ಅಲ್ಲಿನ ಸಮಸ್ತ ವಿದ್ಯಾರ್ಥಿಗಳ ಹಿತ ಕಾಪಾಡುವ ಕೆಲಸ ಮಾಡಿ, ಇಲ್ಲದಿದ್ದರೇ ವಸತಿ ನಿಲಯಗಳು ಮುಚ್ಚಿ, ಸರ್ಕಾರಕ್ಕೆ ನಿಮಗೆ ಸಂಬಳವಾದರೂ ಉಳಿಯುತ್ತೆ. ಏನ್ರಿ ಜಿಲ್ಲೆಯ ಬಹುತೇಕ ವಸತಿ ನಿಲಯಗಳು ನೂರೆಂಟು ಸಮಸ್ಯೆಗಳಿಂದ ಕೂಡಿವೆ. ಇದು ನೋಡಿ, ಕೇಳಿ ನನಗಂತೂ ನಾಚಿಕೆ ಆಗುತ್ತಿದೆ, ನಿಮಗೆ ಏನಾಗುತ್ತಿದೆ ಗೊತ್ತಿಲ್ಲ. ಇಲ್ಲಿ ಎಲ್ಲವೂ ಸರಿ ಮಾಡಲು ಲೋಕಾಯುಕ್ತರೇ ಬರಬೇಕೇನು ಎಂದು ಪ್ರಶ್ನಿಸಿದ ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ಎಸ್.ಪಾಟೀಲ್ ಅವರು, ಹೀಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವ ಮೂಲಕ ಬೆವರು ಇಳಿಸಿದವರು. ನಗರದ ಜಿಪಂ ಸಭಾಂಗಣದಲ್ಲಿ ಮಂಗಳವಾರ ಸಂಜೆ 4ಕ್ಕೆ ಆರಂಭಗೊಂಡ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ ಒಂದು ವಾರದಲ್ಲಿ ಲೋಕಾಯುಕ್ತ ನ್ಯಾಯಧೀಶ ರಮಾಕಾಂತ ಚವ್ಹಾಣ ನೇತೃತ್ವದ ತಂಡ ಇಡಿ ಜಿಲ್ಲೆಯಲ್ಲಿ ಸಂಚರಿಸಿ ವಿವಿಧ ಇಲಾಖೆಗಳಲ್ಲಿನ ಲೋಪದೋಷಗಳ ವರದಿ ನನಗೆ ನೀಡಿದ್ದು, ಮುಖ್ಯವಾಗಿ ವಿವಿಧ ಇಲಾಖೆಗಳು ನಡೆಸುವ ವಸತಿ ನಿಲಯಗಳ ಅವ್ಯವಸ್ಥೆ ಬಗ್ಗೆ ವರದಿ ಓದಿ, ಕೇಳಿ ದಂಗಾಗಿದ್ದನೆ ಎಂದರು. ಸಮಾಜ ಕಲ್ಯಾಣ, ಬಿಸಿಎಂ, ಅಲ್ಪಸಂಖ್ಯಾತರ ಮತ್ತು ಇತರೇ ಇಲಾಖೆಗಳ ಅಧಿಕಾರಿಗಳಿಗೆ ಈ ಬಗ್ಗೆ ಕೇಳಿದಾಗ ಸಮರ್ಪಕ ಉತ ರವೇ ಇರಲಿಲ್ಲ. 100 ಮಕ್ಕಳು ಇರುವ ವಸತಿ ನಿಲಯದಲ್ಲಿ ನಾಲ್ಕೆ ಶೌಚಾಲಯ ಎಂದರೇ ಹೇಗೆ? ಅವು ಕೂಡಾ ಮುರಿದ ಬಾಗಿಲು ಹೊಂದಿವೆ, ಕಳಪೆ ಊಟ ನೀಡಿದರೆ ಮಕ್ಕಳು ಆರೋಗ್ಯದಿಂದ ಇರಲು ಸಾಧ್ಯವೇ? ಎಂದು ಪ್ರಶ್ನಿಸಿದ ಪಾಟೀಲ್, ಇದು ಪಾಪದ ಕೆಲಸ, ನಿಮ್ಮ ಇಲಾಖೆಗಳ ಹಿರಿಯ ಅಧಿಕಾರಿ ಮತ್ತು ನಿಮ್ಮ ಮೇಲೆ ದೂರು ದಾಖಲಿಸಿವುದಾಗಿ ಎಚ್ಚರಿಸಿದರು.ಇಲ್ಲಿನ ಕನಕ ನಗರದಲ್ಲಿ ಇರುವ ಸರ್ಕಾರಿ ಅನುದಾನಿತ ವಸತಿ ನಿಲಯ ದನದ ಕೊಟ್ಟಿಗೆಯ ರಾಗಿದೆ. 50 ಮಕ್ಕಳು ಒಂದೇ ಕೋಣೆಯಲ್ಲಿ ಇರುವುದಾದರೂ ಹೇಗೆ? ಕೂಡಲೇ ಅನುದಾನ ನಿಲ್ಲಿಸಿ ಎಂದು ನ್ಯಾಯಮೂರ್ತಿಗಳು ಆದೇಶಿಸಿದರು.

ನಗರದಲ್ಲಿ ನಿತ್ಯ 20 ಟನ್ ಘನತ್ಯಾಜ್ಯ ಸಂಗ್ರಹವಾಗುತ್ತಿದ್ದು, ಅದನ್ನು ಬಬಲಾದನಲ್ಲಿ ಡಂಪ್ ಮಾಡಿ ವಿಲೇವಾರಿ ಮಾಡಲಾಗಿದ್ದು, ಆದರೇ ಕೇವಲ 12 ಟನ್ ವಿಲೇವಾರಿ ಆಗುತ್ತಿದ್ದು, 8 ಟನ್ ಆಗೇ ಉಳಿಯುತ್ತಿದ್ದು, ಇದರಿಂದ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಏನು ಮಾಡುತ್ತಿದ್ದಿರಿ ಎಂದು ಪೌರಾಯುಕ್ತ ಉಮೇಶ ಚವ್ಹಾಣ ಅವರನ್ನು ನ್ಯಾಯಮೂರ್ತಿಗಳು ಕೇಳಿದಾಗ, ಕರೆಂಟ್ ಸಮಸ್ಯೆ ಇದೆ. ಟೆಂಡರ್ ಪ್ರಕ್ರಿಯೆ ಮುಗಿಸಿ ನಿತ್ಯವೂ ಪೂರ್ತಿ ವಿಲೇವಾರಿ ಮಾಡಲಾಗುವುದೆಂದರು. ನಗರದಲ್ಲಿ 3ರಿಂದ 4 ಸಾವಿರ ಬೀದಿ ನಾಯಿಗಳಿವೆ ಎನ್ನುತ್ತಿರಿ, ಅವುಗಳಲ್ಲಿ ಎಷ್ಟು ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಮಾಡಿಸಿದ್ದಿರಿ ಎಂದು ಕೇಳಿದಾಗ, ಉತ್ತರಿಸಿದ ಚವ್ಹಾಣ ಅವರು, ಕೇವಲ 10 ನಾಯಿಗಳಿಗೆ ಮಾಡಿಸಲಾಗಿದೆ ಎಂದು ಉತ್ತರಿಸಿದಾಗ ಕೊಪಗೊಂಡ ಅವರು, ಏನ್ರಿ ಕೆಲಸ ಮಾಡಲು ಮನಸ್ಸು ಇಲ್ಲವೇ, ನಗರದಲ್ಲಿ ಎಲ್ಲೆಂದರಲ್ಲಿ ಕಸ, ಬಾಟಲಿ, ಪ್ಲಾಸ್ಟಿಕ್ ಎಸೆಯಲಾಗಿದೆ. ನಗರಸಭೆ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದ ಅವರು ನಿಮ್ಮ ಮೇಲೆಯೂ ದೂರು ದಾಖಲಿಸಲಾಗುವುದೆಂದರು.

• **ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ**

ಇಲ್ಲಿನ ಯಿಮ್ಸ್ ಆಸ್ಪತ್ರೆಯಲ್ಲಿನ ಸಮಸ್ಯೆಗಳ ತಿಳಿದ ನ್ಯಾಯಮೂರ್ತಿ ಪಾಟೀಲ್ ಅವರು, ಡಿನ್ ಡಾ.ಸಂದೀಪ ಅವರಿಂದ ಮಾಹಿತಿ ಪಡೆದು ಇಲಾಖೆ ಕಾರ್ಯದರ್ಶಿ, ಆಯುಕ್ತರ ವಿರುದ್ಧ ದೂರು ದಾಖಲಿಸಿ, ಅವರನ್ನೇ ಪಾರ್ಟಿ ಮಾಡಿ, ಅಗತ್ಯ ಸೌಲಭ್ಯಗಳು ಸಿಗುವಂತೆಯೇ ಮಾಡಲಾಗುವುದು. ಆದರೇ ನೀವು ಇದ್ದುದರಲ್ಲಿಯೇ ಸ್ವಚ್ಛತೆ ಕಾಪಾಡಿ, ರೋಗಿಗಳಿಗೆ ಚಿಕಿತ್ಸೆ ನೀಡುವಂತೆ ಸೂಚಿಸಿದರು.

• **ಬಸ್ ನಿಲ್ದಾಣ ಸ್ವಚ್ಛವಾಗಿಡಿ**

ನಗರದ ಹೊಸ ಬಸ್ ನಿಲ್ದಾಣ ಸೇರಿದಂತೆಯೇ ಜಿಲ್ಲೆಯ ಬಹುತೇಕ ಬಸ್ ನಿಲ್ದಾಣಗಳ ಅವ್ಯವಸ್ಥೆಯಿಂದ ಕೂಡಿವೆ. ಆಸನಗಳಿಲ್ಲ, ಶೌಚಾಲಯಗಳು ಗಬ್ಬೆದ್ದು ನಾರುತ್ತಿವೆ. ಪಾರ್ಕಿಂಗ್‌ನಲ್ಲಿ ಹೆಚ್ಚಿನ ಹಣ ಮತ್ತು ಶೌಚಾಲಯಕ್ಕೂ ಹೆಚ್ಚು ಹಣ ತೆಗೆದುಕೊಳ್ಳುವ ಬಗ್ಗೆ ದೂರುಗಳು ಬಂದಿವೆ. ಕೂಡಲೇ ಸರಿ ಮಾಡಿ ಎಂದು ಸಾರಿಗೆ ಅಧಿಕಾರಿ ಮಂಜುನಾಥ ಅವರಿಗೆ ಪಾಟೀಲ್ ಅವರು ತಾಕಿತು ಮಾಡಿದರು.

• **ಅಕ್ರಮ ಮದ್ಯ ಮಾರಾಟ ತಡೆಯಿರಿ**

ಹೀಗೆ ಸುಮಾರ 50 ಇಲಾಖೆಗಳ ಅಧಿಕಾರಿಗಳಿಗೆ ತಮ್ಮ ಲೋಪದೋಷಗಳನ್ನು ತಿದ್ದಿಕೊಂಡು ಜನರ ಕೆಲಸ ಮಾಡಿ, ಇಲ್ಲಿಯ ಜನರು ಮುಗ್ಧರಾಗಿದ್ದಾರೆ. ಅದರ ದುರುಪಯೋಗ ಆಗಬಾರದು ಎಂದ ಅವರು, ಸ್ವಚ್ಛ ಭಾರತ, ಭೂ ಗಣಿ ಮತ್ತು ವಿಜ್ಞಾನ ಇಲಾಖೆ ಬಗ್ಗೆ ಡಿಸಿ ಹರ್ಷಲ್ ಬೋಯರ್ ಅವರಿಂದ ಮಾಹಿತಿ ಪಡೆದರು. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಕುರಿತು ಅಬಕಾರಿ ಇಲಾಖೆಯೊಂದಿಗೆ ದಾಳಿ ನಡೆಸಿ ನಿಯಂತ್ರಿಸಿ ಎಂದು ಎಸ್‌ಪಿ ಪುದ್ದಿಕ್ ಶಂಕರ್ ಅವರಿಗೆ ಸೂಚಿಸಿದರು. ಜಿಪಂ ಲವೀಶ ಓರ್ಡಿಯಾ ಅವರು ತಮ್ಮ ಇಲಾಖೆ ಬಗ್ಗೆ ಮಾಹಿತಿ ನೀಡಿದರು. ಲೋಕಾಯುಕ್ತ ನ್ಯಾಯಧೀಶರಾದ ಸಿದ್ಧರಾಜು, ರಮಾಕಾಂತ ಚವ್ಹಾಣ ವೇದಿಕೆಯಲ್ಲಿ ಇದ್ದರು.

# ಮಾನವ ಜನ್ಮ ವ್ಯರ್ಥವಾಗದಿರಲಿ ಹಾರಕೂಡ ಶ್ರೀ.



• **ಮಲ್ಲಮ್ಮ ನುಡಿ ವಾರ್ತೆ,ಬಸವಕಲ್ಯಾಣ:**

ದೈವಾನುಗ್ರಹದಿಂದ ಲಭಿಸಿರುವ ಶ್ರೇಷ್ಠ ಮಾನವ ಜನ್ಮವನ್ನು ಕಾಲಹರಣ ಮಾಡಿ ವ್ಯರ್ಥವಾಗದಂತೆ ಭಗವಂತ ಮೆಚ್ಚುವ ರೀತಿಯಲ್ಲಿ ಬದುಕಬೇಕು ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಘಾಟ ಹಿಪ್ಪರಗಾ ತಾಂಡಾದ ದುರ್ಗಾದೇವಿಯ 85ನೇ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ ಧರ್ಮಸಭೆಯ ಪಾವನ ಸನ್ನಿಧಾನ ವಹಿಸಿ ಮಾತನಾಡಿದ ಶ್ರೀಗಳು, ಶೈಶವದಿಂದಲೆ ಶಿವ ಮಾರ್ಗದಲ್ಲಿ ನಡೆದವರ ಇಡೀ ಬಾಳು ಮಂಗಳಮಯವಾಗಿರುತ್ತದೆ.

ದೈಹಿಕವಾಗಿ ಸದೃಢವಾಗಿರುವಾಗಲೆ ಅಧ್ಯಾತ್ಮ ಹಾಗೂ ಧರ್ಮಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು, ಅಂದಾಗ ವೃದ್ಯಾಪ್ಯ ಸು:ಖಕರವಾಗಿರುತ್ತದೆ. ವ್ಯಾಮೋಹಗಳಿಗೆ ಬಲಿಯಾಗದೆ, ತಂದೆ ತಾಯಿ ಗುರು ಹಿರಿಯರ ಮಾರ್ಗದರ್ಶನದಲ್ಲಿ ನಡೆದರೆ ಬದುಕು ಸುಗಂಧಭರಿತವಾಗಿರುತ್ತದೆ ಎಂದು ನುಡಿದರು.

ತಾಂಡಾದ ಆರಾಧ್ಯ ಶಕ್ತಿ ದೇವತೆಯಾದ ದುರ್ಗಾ ಮಾತೆ, ಸಂತ ಸೇವಾಲಾಲ್ ಮಹಾರಾಜ ಹಾಗೂ ಹಾರಕೂಡ ಲಿಂ. ಚನ್ನಬಸವ ಶಿವಯೋಗಿಗಳು ಎಲ್ಲರ ಬದುಕಲ್ಲಿ ಒಳಿತಿನ ಹೊಳೆ ಹರಿಸಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ

ರಂಗರಾವ ಪೂಜಾರಿ, ಅಂಕುಶ ಚವಾಣ, ಡಾಕು ಸಿಂಗ್, ಶಂಕರ್ ಪುನ್ನಾ ಚವಹಾಣ, ಸತೀಶ್ ರಾಠೋಡ್, ರಾಜಕುಮಾರ ರಾಠೋಡ್, ವಿಕ್ರಮ್ ಚವ್ಹಾಣ, ಸಂಜು ಚವ್ಹಾಣ, ಬಾಬು ಮುನ್ನಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಹೀರಾ ಸಿಂಗ್ ಚವ್ಹಾಣ. ಸ್ವಾಗತಿಸಿದರು. ಕಾರ್ತಿಕ ಸ್ವಾಮಿ ಎಲ್ಲದಗುಂಡಿ ಪ್ರಾರ್ಥನೆ ಗೀತೆ ಹಾಡಿದರು.

# ದೇಹಭಾವ ಇರುವವರೆಗೆ ದೇವಭಾವ ನೆಲೆಗೊಳ್ಳದು:ಮಹಾಸ್ವಾಮೀಜಿ.



ಮಲ್ಲಮ್ಮ ನುಡಿ ವಾರ್ತೆ.ಬಸವಕಲ್ಯಾಣ:– ದೇವನು ಸರ್ವಾಂತರ್ಯಾಮಿ. ಸರ್ವಶಕ್ತ. ನಿರಾಕಾರ ನಿರ್ಗುಣನಾದ ಪರಮಾತ್ಮನನ್ನು ಅರಿಯಬೇಕಾದರೆ ನಮ್ಮ ಮನಸ್ಸು ನಿರ್ಮಲವಾಗಬೇಕು. ತಿಳಿಯಾದ ನೀರಿನಲ್ಲಿ ನಮ್ಮ ಮುಖ ಕಾಣುವಂತೆ, ಶುದ್ಧವಾದ ಮನದಲ್ಲಿ ಮಾತ್ರ ದೇವನು ನೆಲೆಸುತ್ತಾನೆ. ದೇವನನ್ನು ಕಾಣಬೇಕಾದರೆ ದೇಹ ಭಾವ ಅಳಿಯಬೇಕು ಎಂದು ಲಿಂಗಾಯತ ಮಹಾಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಪ್ರಭುದೇವ ಮಹಾಸ್ವಾಮೀಜಿ ನುಡಿದರು.ಹುಲಸೂರ ತಾಲ್ಲೂಕಿನ ಗೋರ್ಟಾ (ಬಿ) ಗ್ರಾಮದಲ್ಲಿ ಲಿಂಗಾಯತ ಮಹಾಮಠ ಮಾಸಿಕ ಶರಣ ಸಂಗಮ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು ಮಾನವನ ನಿಜವಾದ ಶೃಂಗಾರ ಯಾವುದೆಂದರೆ ಕಣ್ಣುಗಳಿಂದ ಗುರು ಹಿರಿಯರ ನೋಡುವುದು. ಕಿವಿಗಳಿಂದ ಶರಣರ ಅನುಭಾವದ ನುಡಿಗಳು ಕೇಳುವುದು. ಕೈಗಳಿಂದ ಸತ್ಪಾತ್ರಕ್ಕೆ ದಾಸೋಹಗೈಯ್ಯುವುದು. ಕಾಲುಗಳಿಂದ ಸತ್ಯದ ದಾರಿಯಲ್ಲಿ ನಡೆಯುವುದು. ಜೀವಿಸುವ ಜೀವನದ ಶೃಂಗಾರ ವಾಗುದೆಂದರೆ ಶರಣರ ಗಣಮೇಳಾಪ ಇದುವೇ ನಿಜವಾದ ಶೃಂಗಾರ. ಆದರೆ ಮಾನವನು ಈ ಶೃಂಗಾರವನ್ನು ಮರೆತು ಭೌತಿಕ ಸುಖದತ್ತ ಸಾಗಿ ದುಃಖವನ್ನೇ ಅನುಭವಿಸುತ್ತಿದ್ದಾನೆ. ದೇವ ಪಥದಿಂದ ದೂರಾಗಿದ್ದಾನೆ. ದೇವನ ಒಲುಮೆ ಆಗಬೇಕಾದರೆ ಕಾಯ –ವಾಚ –ಮನಸಾ ತ್ರಿಕರಣ ಶುದ್ಧವಾದದಾಗ ಮಾತ್ರ ದೇವನು ತನ್ನೊಳಗೆ ನೆಲೆಸುತ್ತಾನೆ ಎಂದು ತಿಳಿಸಿದರು. ಪರುಷಕಟ್ಟೆ ಚನ್ನಬಸವಣ್ಣ ಮಾತನಾಡಿ ನಮ್ಮ ಜೀವನ ಪಾವನವಾಗಬೇಕಾದರೆ ಮನಸು ಹೇಳಿದಂತೆ ನಾವು ಕೇಳಬಾರದು ನಾವು ಹೇಳಿದಂತೆ ಮನಸ್ಸು ಕೇಳಬೇಕು.ತಾನು ಬಯಸಿದಂತೆ ತನಗೆ ಬೇಕಾದಂತೆ ಯಾರಾದರೂ ನುಡಿದರೆ ಮನವು ಹಿಗ್ಗಿ ನಲಿದಾಡುವುದು. ತನ್ನ ಬಯಕೆಯ ವಿರುದ್ಧವಾಗಿ ಮಾತನಾಡಿದರೆ ಕುಗ್ಗುವುದು. ತನ್ನ ವಿರುದ್ಧ ಸತ್ಯವನ್ನೇ ನುಡಿದರು ಸಹಿಸಲಾರದು. ತನಿಚ್ಛೆಯಂತೆ ನುಡಿದವರನ್ನು ಮಾತ್ರ ಪ್ರೀತಿಸುತ್ತದೆ. ಇದು ಮನದ ಸ್ವಭಾವ.ಹೊಗಳಿಕೆಗೆ ಉಬ್ಬದವರೇ ಇಲ್ಲ. ಇದರಿಂದ ಅಹಂ ಹೆಚ್ಚಾಗುವುದಲ್ಲದೆ ಬೇರೇನು ಸಾಧನೆಯಾಗದು ಎಂದು ತಿಳಿಸಿದರು. ಓಂಕಾರ ಬಿರಾದರ ಉದ್ಘಾಟಿಸಿದರು. ಅಧ್ಯಕ್ಷತೆ ರಾಜಕುಮಾರ ಬಿರಾದರ ವಹಿಸಿದರು. ಮುಖ್ಯ ಅತಿಥಿಗಳಾಗಿ ವಿಜಯಲಕ್ಷ್ಮಿ ರಾಜೋಳೆ. ಗಂಗಮ್ಮ ಚಂದ್ರಶೇಖರ ಜಗಶೆಟ್ಟೆ.ನೀಲಾವತಿ ದತ್ತಾತ್ರಿ ಜಗಶೆಟ್ಟಿ ಗುರುಪೂಜೆ ನೆರವೇರಿಸಿದರು. ಶಾಶ್ವತ್ ಸೋಮನಾಥಪ್ಪ ರಾಜೇಶ್ವರ್. ಲಿಂಗಾಯತ ಸೇವಾದಳದ ಅಧ್ಯಕ್ಷರಾದ ಸುಪ್ರೀತ ಪತಂಗೆ. ಬಾಬುರಾವ ರಾಜೋಳೆ. ಚಂದ್ರಕಾಂತ ಕಣಜೆ. ಸುಭಾಶ ಪತಂಗೆ.ಶಿವರಾಜ ಕನಕಟ್ಟೆ. ಶ್ರೀಮಂತಪ್ಪ ರಾಜೇಶ್ವರೆ ಸೇರಿದಂತೆ ಅನೇಕರು ಭಾಗವಹಿಸಿದರು.

# ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿಯ ನಾಯಕತ್ವಕ್ಕೆ ಅಭಿನಂದನೆಗಳು

ವಿಶೇಷ ಲೇಖನ.

ಕಾರವಾರ:



ಕರ್ನಾಟಕದ ಸಾಮಾಜಿಕ ನ್ಯಾಯ ಹಾಗೂ ಜನಪರ ಸರ್ವಾಂಗೀಣ ಅಭಿವೃದ್ಧಿ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿಯ ನಾಯಕತ್ವಕ್ಕೆ ಅಭಿನಂದನೆಗಳು ಸಲ್ಲಿಸುತ್ತಾ, ಕರ್ನಾಟಕದ ರಾಜಕೀಯ ಇತಿಹಾಸವು ಜನಪರ ಆಡಳಿತ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಾತ್ಮಕ ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸಿದ ಮಹಾನ್ ನಾಯಕರ ದಿಟ್ಟ ಹೋರಾಟಗಳಿಂದ ರೂಪುಗೊಂಡ ಸುವರ್ಣ ಪರಂಪರೆಯನ್ನು ಹೊಂದಿದೆ. ಶೋಷಿತರು, ಹಿಂದುಳಿದವರು ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಪರವಾಗಿ ಧೈರ್ಯವಾಗಿ ನಿಂತ ನಾಯಕರಿಂದಲೇ ಈ ನಾಡಿನ ಪ್ರಗತಿಪರ ರಾಜಕೀಯ ಸಂಸ್ಕೃತಿ ಬೆಳೆದಿದೆ.ಆ ಪರಂಪರೆಯಲ್ಲಿ ಅಚ್ಚಳಿಯದ ಗುರುತು ಮೂಡಿಸಿದ ಮಹಾನ್ ನಾಯಕರಲ್ಲಿ ಸನ್ಮಾನ್ಯ ಶ್ರೀ ದಿವಂಗತ ದೇವರಾಜ ಅರಸು ಅವರು ಅಗ್ರಗಣ್ಯರು. ಅವರು 20–03–1972 ರಿಂದ 31–12–1977 ರವರೆಗೆ ಹಾಗೂ 28–02–1978 ರಿಂದ 07–01–1980 ರವರೆಗೆ ಒಟ್ಟಾರೆ 2792 ದಿನಗಳ ಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ, ಭೂ ಸುಧಾರಣೆ, ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಉನ್ನತಿ ಮತ್ತು ಶೋಷಿತರ ಸಬಲೀಕರಣದ ಮೂಲಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಅಮರ ಅಧ್ಯಾಯವೊಂದನ್ನು ರಚಿಸಿದರು.

ಅದಲ್ಲದೆ ಕರ್ನಾಟಕ ರಾಜ್ಯವನ್ನು ಪ್ರಗತಿಪರ ಚಿಂತನೆಯತ್ತ ತರುವುದರಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಯುತ ಕೆಂಗಲ್ ಹನುಮಂತಯ್ಯ ,ಶ್ರೀಯುತ ನಿಜಲಿಂಗಪ್ಪ, ಶ್ರೀಯುತ ರಾಮಕೃಷ್ಣ ಹೆಗಡೆ ಇವರುಗಳ ವಿಶಾಲ ದೃಷ್ಟಿಕೋನದ ವಿಚಾರಗಳು ಹಾಗೂ ಪ್ರಾಮಾಣಿಕ ಚಿಂತನೆಗಳು ನಮ್ಮ ಮುಂದೆ ಇಂದಿಗೂ ಜೀವಂತ ಇರುತ್ತವೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದೇ ಸಾಮಾಜಿಕ ನ್ಯಾಯ ತಾತ್ವಿಕ ಮತ್ತು ರಾಜಕೀಯ ಪರಂಪರ ಮತ್ತು ಸರ್ವಾಂಗೀಣ ಅಭಿವೃದ್ಧಿ ಚಿಂತನೆಗಳನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಮುಂದುವರೆಸಿಕೊಂಡು, ಕರ್ನಾಟಕದ ಇತಿಹಾಸಕ್ಕೆ ಹೊಸ ಮೈಲಿಗಲ್ಲು ಸ್ಥಾಪಿಸಿ, ದಿನಾಂಕ. 13–05–2013 ರಿಂದ 15–05–2018 ರವರೆಗೆ ಹಾಗೂ 20–05–2023 ರಿಂದ 06–01–2026 ರವರೆಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು, ಸುದೀರ್ಘ ಮತ್ತು ಸಾರ್ಥಕ ಆಡಳಿತದ ಮೂಲಕ ಚಾರಿತ್ರಿಕ ದಾಖಲೆ ನಿರ್ಮಿಸುತ್ತಿರುವುದು ರಾಜ್ಯದ ಜನತೆಗೆ ಅಪಾರ ಹೆಮ್ಮೆಯ ವಿಷಯವಾಗಿದೆ. ಹಾಗೂ ಮುಂದಿನ ಎರಡುವರೆ ವರ್ಷಗಳ ಕಾಲ ಅಂದರೆ 28 ಮೇ 2028 ರವರೆಗೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರಿ ಎಂದು ನನ್ನ ನಂಬಿಕೆಯಾಗಿದೆ ಪ್ರಾಮಾಣಿಕ ಹಾಗೂ ಪಾರದರ್ಶಕ ಆಡಳಿತವು ಸ್ಪಷ್ಟವಾಗಿ ಜನಪರ, ಸಂವಿಧಾನಬದ್ಧ ಮತ್ತು ಸಾಮಾಜಿಕ ನ್ಯಾಯ ಕೇಂದ್ರಿತವಾಗಿದೆ. ರಾಜ್ಯದ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ ಯಾವುದೇ ಧರ್ಮ ಜಾತಿ ಭೇದವಿಲ್ಲದೆ ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಹಾಗೂ ರೈತ ಸಮುದಾಯಕ್ಕೆ ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ಬಡವರು, ಮಹಿಳೆಯರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಗೌರವವನ್ನು ಒದಗಿಸುವಲ್ಲಿ ಅವರ ಪ್ರಾಮಾಣಿಕ ವಿಚಾರಗಳು ಮಹತ್ವದ ಪಾತ್ರ ವಹಿಸಿದೆ. ಈ ಯೋಜನೆಗಳು ಕರ್ನಾಟಕವನ್ನು ನಿಜಾರ್ಥದಲ್ಲಿ ಕಲ್ಯಾಣರಾಜ್ಯದ ಮಾದರಿಯಾಗಿ ರೂಪಿಸುವ ದಿಟ್ಟ ರಾಜಕೀಯ ಸಂಕಲ್ಪದ ಪ್ರತಿಬಿಂಬಗಳಾಗಿವೆ.


# ಪುರಸಭೆ ಕಾರ್ಯಾಲಯ,ಹುಮನಾಬಾದ

ಸಂಖ್ಯೆ: ಪುಸಹು/ಆರೋಗ್ಯ/ಸಿಆರ್- /2026-27 ದಿನಾಂಕ: 06-01-2026

## ಕೋಟೆಷನ್ ದರ ಆಹ್ವಾನಿಸಿ ಪ್ರಕಟಣೆ

ಹುಮನಾಬಾದ ಪುರಸಭೆಯಲ್ಲಿ ಮಾಹೆ ಜನೆವರಿ 2026ರ ತಿಂಗಳಲ್ಲಿ ಜರುಗುವ ಶ್ರೀ ವೀರಭದ್ರೇಶ್ವರ ಜಾತ್ರೆಯ ಪ್ರಯುಕ್ತ ಪಟ್ಟಣದಲ್ಲಿ ವಿಶೇಷ ಸ್ವಚತೆ ಹಾಗೂ ನೈರ್ಮಲ್ಯ ಕೆಲಸಕ್ಕಾಗಿ ನೈರ್ಮಲಿಕರಣ ಕಾರ್ಮಿಕರನ್ನು ಕನಿಷ್ಠ ವೇತನದಲ್ಲಿ ಸರಬರಾಜು ಮಾಡಲು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ರಡಿ ನೊಂದಾಯಿತ ಮತ್ತು ಅರ್ಹ ಗುತ್ತಿಗೆದಾರರು/ಏಜನ್ಸಿ ಯವರಿಂದ ಐಟಂವಾರು ಟೆಂಡರ್ ದರ ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಗುತ್ತಿಗೆದಾರರು/ಏಜನ್ಸಿಯವರು ನಿಗದಿ ಪಡಿಸಿದ ದಿನಾಂಕದೊಳಗೆ ಸೀಲ್ ಮಾಡಿದ ಲಕೋಟೆಯಲ್ಲಿ ತಮ್ಮ ಟೆಂಡರ್ ದರಗಳು ಸಲ್ಲಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನ ದಿನಾಂಕ: 12-01-2026ರ 05.00 ಗಂಟೆ.
2) ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನ ದಿನಾಂಕ: 13-01-2025 ಸಮಯ 04.00 ಗಂಟೆ.

| ಕ್ರ ಸಂ. | ಕಾಮಗಾರಿ ಹೆಸರು | ಪರಿಮಾಣ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ಮೊತ್ತ | ಅವಧಿ |
|---|---|---|---|---|---|
| 1 | Supply of Heavy Mazdoor/Sweeper | 20 Menbers | 4.10 | 10250/- | 1 ತಿಂಗಳು |

**ಷರತ್ತುಗಳು:**

1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಯೊಂದಿಗೆ ಇ.ಎಂ.ಡಿ. ಮೊತ್ತಕ್ಕೆ ಮುಖ್ಯಾಧಿಕಾರಿಗಳು ಪುರಸಭೆ ಹುಮನಾಬಾದ ಹೆಸರಲ್ಲಿ ಡಿ.ಡಿ. ಲಗತ್ತಿಸಿ ಸಲ್ಲಿಸುವುದು.
2) ಟೆಂಡರ್ ಕಡಿಮೆ ದರ ನಮೂದಿಸಿದಲ್ಲಿ ವ್ಯತ್ಯಾಸ ಮೊತ್ತಕ್ಕೆ ಡಿ.ಡಿ. ಯನ್ನು ಟೆಂಡರ್ ಫಾರಂದೊಂದಿಗೆ ಲಗತ್ತಿಸುವುದು.
3) ನಿಗದಿ ಪಡಿಸಿದ ದಿನಾಂಕ ಮತ್ತು ಸಮಯ ಮೀರಿ ಬಂದ ಅರ್ಜಿಗಳನ್ನು ತಿಸ್ಕರಿಸಲಾಗುವುದು.
4) ಯಾವುದೇ ಅಥವಾ ಎಲ್ಲಾ ಟೆಂಡರ್ ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಪುರಸಭೆ ಕಾಯ್ದಿರಿಸಲಾಗಿದೆ.

ಸಹಿ/-
ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)

# ವಿವಿಎಸ್ ಅಧ್ಯಕ್ಷ ಕಲ್ಲೂರು ವೆಂಕಟೇಶಲು ಶೆಟ್ಟಿಗೆ ನಂದಿ ಅವಾರ್ಡ್



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಆಂಧ್ರಪ್ರದೇಶದ ನರಸರಾವ್‌ಪೇಟೆಯ ವಿಶ್ವಜನನಿ ಫೌಂಡೇಶನ್‌ರವರು ಎಕ್ಸಲೆನ್ಸಿ ಅವಾರ್ಡ್ಸ್ ಅನ್ನು ಬೊಗ್ಗ ವರಪು ಬ್ರಹ್ಮಾನಂದಂ ಅವರ ನೇತೃತ್ವದಲ್ಲಿ ಎಲ್ಲಾ ಸಮಾಜದವರನ್ನು ಗುರುತಿಸಿ ಕರ್ನಾಟಕ ಬಳ್ಳಾರಿಯ ವೆಂಕಟ ವರದಾಚಾರ್ಯ ಸೇವಾ ಸಮಿತಿ ಟ್ರಸ್ಟ್ ಅವರನ್ನು ಇವರ ಸೇವೆಯನ್ನು ಗುರುತಿಸಿ ನಂದಿ ಅವಾರ್ಡ್ ಅನ್ನು ಪ್ರಮುಖರ ಸಿನಿಮಾ ಕಲಾಕಾರರು ಮಠಾಧಿಪತಿಗಳಾದ ಗುರುಗಳ ಸಮ್ಮುಖದಲ್ಲಿ ಬಳ್ಳಾರಿಯ ವಿವಿಎಸ್ ಟ್ರಸ್ಟ್ ಅಧ್ಯಕ್ಷ ಕಲ್ಲೂರು ವೆಂಕಟೇಶಲು ಶೆಟ್ಟಿ ಗುರುತಿಸಿ ವಿಜಯವಾಡದಲ್ಲಿ ಸನ್ಮಾನಿಸಲಾಯಿತು.

# ರೆಡ್ಡಿ ಮರಣೋತ್ತರ ಪರೀಕ್ಷೆ ಒಂದೇ ಬಾರಿ ನಡೆದಿದ್ದು: ಡಿಸಿಎಂ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಗಲಾಟೆ ಪ್ರಕರಣದಲ್ಲಿ ಹತ್ಯೆಯಾದ ಕೈ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಮರಣೋತ್ತರ ಪರೀಕ್ಷೆ ಎರಡು ಬಾರಿ ನಡೆದಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಯಾವ ಆಧಾರದ ಮೇಲೆ ಹೇಳಿದ್ದಾರೋ ಗೊತ್ತಿಲ್ಲ, ಡಿಎಚ್ ಒ ಅವರಿಗೆ ಈ ಕುರಿತು ಕೇಳಿದೆ, ಒಂದೇ ಬಾರಿ ನಡೆದಿದ್ದು ಎಂದು ಹೇಳಿದ್ದಾರೆ. ಕೇಂದ್ರ ಸಚಿವರು ತಪ್ಪು ಸಂದೇಶ ಕೊಟ್ಟಿದ್ದು, ಇದು ಸರಿಯಲ್ಲ ಎಂದು ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಘಟನೆ ಕುರಿತು ಪೊಲೀಸ್‌ರು ಪ್ರಕರಣ ದಾಖಲಿಸಿಕೊಂಡಿದ್ದು, ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ, ಕಳೆವರನ್ನು ವಶಕ್ಕೆ ಪಡೆದಿದ್ದಾರೆ, ಉಳಿದವರನ್ನು ಬಂಧಿಸಿ ಎಂದು ನಾವು ಶಿಫಾರಸು ಮಾಡೋಕೆ ಆಗೋಲ್ಲ. ಪೊಲೀಸ್‌ರು ತಮ್ಮ ಕೆಲಸ ತಾವು ಮಾಡುತ್ತಿದ್ದಾರೆ. ಸತ್ಯ ಎಂದು ಮುಚ್ಚಿಡಲು ಸಾಧ್ಯವಿಲ್ಲ, ಮರೆ ಮಾಚಲು ಆಗೋಲ್ಲ. ಕಳೆದ 8-10 ವರ್ಷಗಳಲ್ಲಿ ಬಳ್ಳಾರಿ ಶಾಂತಿಗೆ ಹೆಸರಾಗಿತ್ತು.

ಇದರ ಮಧ್ಯೆ ಬ್ಯಾನರ್ ಕಟ್ಟುವ ಸಣ್ಣ ವಿಚಾರಕ್ಕೆ ಇಂತಹ ಗಲಭೆ ನಡೆದಿರುವುದು, ನಮ್ಮ



ಕಾರ್ಯಕರ್ತನನ್ನು ಕಳೆದುಕೊಂಡಿರುವುದು ಅತ್ಯಂತ ನೋವನ್ನುಂಟು ಮಾಡಿದೆ. ನಾನು ಇಂದು ಮೃತರ ಮನೆಗೆ ಭೇಟಿ ನೀಡಿರುವೆ, ಸರ್ಕಾರ ಹಾಗೂ ಪಕ್ಷದಿಂದ ಏನು ಮಾಡಬೇಕು ಎಂಬುದು ಸಿ.ಎಂ.ಅವರೊಂದಿಗೆ ಚರ್ಚಿಸಿ ತೀರ್ಮಾನ ಮಾಡಲಾಗುವುದು. ಖಂಡಿತ ಎಲ್ಲರೂ ಅವರ ಕುಟುಂಬದ ಜೊತೆ ನಿಲ್ಲಲ್ಲಿದ್ದೇವೆ ಎಂದು ಧೈರ್ಯ ತುಂಬಿದ್ದೇವೆ ಎಂದರು.

ಘಟನೆಗೆ ಸಂಬಂಧಿಸಿ ಪ್ರತ್ಯೇಕ ನನ್ನ ತಂಡವನ್ನು ಗುಪ್ತವಾಗಿ ಕಳಿಸಿ ವರದಿ ಪಡೆದಿರುವೆ. ಅದ್ದೂರಿಯಾಗಿ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಹಿನ್ನೆಲೆ ಬ್ಯಾನರ್ ಕಟ್ಟುವುದು ಸಹಜ. ಜನಾರ್ಧನರೆಡ್ಡಿ ನಿವಾಸದ ಎದುರು ಅಳವಡಿಸಿದ ಬ್ಯಾನರ್ ತೆರವುಗೊಳಿಸಿ ಎಂದು ರೆಡ್ಡಿ ಅವರು ಪಾಲಿಕೆ ಆಯುಕ್ತರು ಅಥವಾ ಪೊಲೀಸ್ ರಿಗೆ ಕರೆ ಮಾಡಿದ್ರೆ ತೆಗೆದು ಹಾಕುತ್ತಿದ್ದರು. ಅದನ್ನೇ ದೊಡ್ಡದು ಈ ರೀತಿ ದೊಡ್ಡದು ಮಾಡುವುದು ಅಗತ್ಯವಿತ್ತಾ ಎಂದು ಪ್ರಶ್ನಿಸಿದರು. ಘಟನೆ ಬಗ್ಗೆ ನನಗೆ ಮೊದಲು ಮಾಹಿತಿ ನೀಡಿದ್ದು ಬಿಜೆಪಿಯ ಮಾಜಿ ಸಚಿವ ಶ್ರೀರಾಮುಲು ಅವರು, ಕೂಡಲೇ ನಾನು ಎಸ್ಪಿ ಅವರಿಗೆ ಮಾತನಾಡಿ ಮಾಹಿತಿ ಪಡೆದೆ. ನಮ್ಮ ಪೊಲೀಸ್ ರು ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದು, ಖಂಡಿತ ಯಾರೇ ಆಗಲಿ ಕ್ರಮ ಕೈಗೊಳ್ಳಲಿದ್ದೇವೆ. ನಮ್ಮ ಶಾಸಕ ನಾರಾ ಭರತ್ ರೆಡ್ಡಿ ಏನು ತಪ್ಪು ಮಾಡಿಲ್ಲ, ಕಾನೂನು ಮೀರಿ ನಡೆದುಕೊಂಡಿಲ್ಲ. ಶ್ರೀರಾಮುಲು ಅವರು, ಮೃತಪಟ್ಟ ರಾಜಶೇಖರ ರೆಡ್ಡಿ ಅವರ ಮರಣೋತ್ತರ ಪರೀಕ್ಷೆ ಎರಡು ಬಾರಿ ನಡೆದಿದೆ ಅಂದಿದ್ದಾರೆ, ಅದು ಯಾವ ಆಧಾರದ ಮೇಲೆ ಹೇಳಿದ್ದಾರೋ ಅವರ ವೈಯಕ್ತಿಕ ವಿಚಾರ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ರಾಜ್ಯಸಭೆ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್, ಸಂಸದ ಈ.ತುಕಾರಾಂ, ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ, ನಗರ ಶಾಸಕ ನಾರಾ ಭರತ್ ರೆಡ್ಡಿ, ಶಾಸಕರಾದ ಜೆ.ಎನ್.ಗಣೇಶ್,ಎನ್.ವೈ.ಗೋಪಾಲಕೃಷ್ಣ, ಬಿ.ಎಂ.ನಾಗರಾಜ್, ಎಮ್ಮೆಲ್ಸಿ ಬಸವನಗೌಡ ಬಾದರ್ಲಿ, ಕೆಪಿಸಿಸಿ ಮಾಜಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ, ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್, ಲೀಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್, ಬುಡಾ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಹುಮಾಯೂನ್ ಖಾನ್, ಮೇಯರ್ ಪಿ. ಗಾದೆಪ್ಪಾ ಇತರರಿದ್ದರು.

# ಬಳ್ಳಾರಿ ಬ್ಯಾನರ್ ಗಲಾಟೆ ಪ್ರಕರಣ ಡಿಸಿಎಂ ಡಿ.ಕೆ.ಶಿವಕುಮಾರ್ ಅಧಿಕಾರಿಗಳೊಂದಿಗೆ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬ್ಯಾನರ್ ಗಲಾಟೆ ಪ್ರಕರಣ, ಗುಂಡಿನ ದಾಳಿಯಲ್ಲಿ ಕೈ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನಗರದ ಅನಂತಪುರ ರಸ್ತೆಯ ಹೊಸ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಬ್ಯಾನರ್ ಕಟ್ಟುವ ವಿಚಾರಕ್ಕೆ ಸಂಬಂಧಿಸಿ ಎರಡು ಗುಂಪಿನ ಮಧ್ಯೆ ನಡೆದ ಘರ್ಷಣೆ, ಗುಂಡಿನ ದಾಳಿ, ಕೈ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಘಟನೆಯಲ್ಲಿ ಮೃತಪಟ್ಟಿರುವ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳಿಂದ ಪೂರಕ ಮಾಹಿತಿ ಪಡೆದರು. ಯಾವುದೇ ಕಾರಣಕ್ಕೂ ಬಳ್ಳಾರಿಯಲ್ಲಿ ಶಾಂತಿಗೆ ಭಂಗ ಆಗಬಾರದು, ನಿರ್ಲಕ್ಷ್ಯ ವಹಿಸದೇ ಅಗತ್ಯ ಕ್ರಮಕೈಗೊಳ್ಳಬೇಕು,

ನಿರ್ಲಕ್ಷ್ಯ ಬೇಡ ಎಂದು ಅಧಿಕಾರಿಗಳಿಗೆ ಡಿಸಿಎಂ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್, ಬಳ್ಳಾರಿ ವಲಯ ಐಜಿಪಿ ವರ್ತಿಕಾ ಕಟಿಯಾರ್, ಚಿತ್ರದುರ್ಗ ಎಸ್ಪಿ ರಂಜಿತ್ ಕುಮಾರ್ ಬಂಡಾರು, ಜಿ.ಪಂ.ಸಿಇಒ ಮಹಮ್ಮದ್ ಹ್ಯಾರಿಸ್ ಸುಮೈರ್, ಎಡಿಸಿ ಮಹಮ್ಮದ್ ಜುಬೇರ್, ಮಹಾನಗರ ಪಾಲಿಕೆ ಆಯುಕ್ತ ಮಂಜುನಾಥ್ ಸೇರಿದಂತೆ ಇತರರು ಇದ್ದರು.

# ಕ್ರಿಯಾ ಯೋಜನೆ ಸಿದ್ಧಪಡಿಸಲು ಸಭೆ

ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷತೆಯಲ್ಲಿ ಜನವರಿ 7ರ ಬೆಳಿಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆ ಜೋನಲ್-2 ಕೋರ್ಟ ಹಾಲ್ (ಹಳೆ ಜಿಲ್ಲಾಧಿಕಾರಿಗಳ ಕಚೇರಿ) ಸಭೆ ಕರೆಯಲಾಗಿದೆ. ಈ ಸಭೆಯಲ್ಲಿ ರಾಯಚೂರು ಮಹಾನಗರಪಾಲಿಕೆ ವತಿಯಿಂದ ಅನುಷ್ಠಾನವಾಗುತ್ತಿರುವ ಶೇ.29 ಪ.ಜಾತಿ & ಪ.ಪಂಗಡ ಶೇ.7.25 ಇತರೆ ಹಿಂದುಳಿದ ಜನಾಂಗ ಶೇ.5 ವಿಕಲಚೇತನರ ಮುಂತಾದ ಬಡತನ ನಿರ್ಮೂಲನ ಯೋಜನೆಗಳ ಕುರಿತು, ಬಾಕಿ ಉಳಿದ ಅನುದಾನಕ್ಕೆ ಅರ್ಹ ಬಡವರಿಗೆ ಸದುಪಯೋಗವಾಗುವಂತ ಚಟುವಟಿಕೆಗಳ ಕ್ರಿಯಾ ಯೋಜನೆ ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

# ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಭಾರತ ಚುನಾವಣಾ ಆಯೋಗವು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರನೊಂದಣಾಧಿಕಾರಿಯನ್ನಾಗಿ ಹಾಗೂ ಈ ಚುನಾವಣಾ ಕ್ಷೇತ್ರ ವ್ಯಾಪ್ತಿಗೊಳಪಡುವ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳನ್ನು ಆಯುಕ್ತರು ಮಹಾನಗರ ಪಾಲಿಕೆ ಕಲಬುರಗಿ, ಬಳ್ಳಾರಿ, ಕಲಬುರಗಿ ವಿಭಾಗದ ಆಯಾ ಉಪ ವಿಭಾಗಕ್ಕೆ ಸಂಬಂಧಪಟ್ಟ ಎಲ್ಲಾ ಸಹಾಯಕ ಆಯುಕ್ತರು, ವಿಭಾಗದ ಎಲ್ಲಾ ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರರನ್ನು ಸಹಾಯಕ ಮತದಾರರನೊಂದಣಾಧಿಕಾರಿಯನ್ನಾಗಿ ನೇಮಿಸಿರುತ್ತದೆ. ಅರ್ಹತಾ 2025ರ ನವೆಂಬರ್ 1ಕ್ಕೆ ಅನ್ವಯಿಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯನ್ನು ಇಂದು 2025ರ ಡಿಸೆಂಬರ್ 30 ರಂದು ಸಂಪೂರ್ಣ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚುರಪಡಿಸಲಾಗಿದ್ದು, ಮತದಾರರು ತಮ್ಮ ಹೆಸರನ್ನು ಆಯಾ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಹಾಗೂ ತಾಲ್ಲೂಕಿನ ಮಹಾನಗರಪಾಲಿಕೆ, ತಹಸೀಲ್ದಾರ ಕಾರ್ಯಾಲಯದಲ್ಲಿ ಪರಿಶೀಲಿಸಿಕೊಳ್ಳಬೇಕು

ಎಂದು ಸುರಪುರ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ ಸಹಾಯಕ ಮತದಾರರನೊಂದಣಾಧಿಕಾರಿಗಳು ಹಾಗೂ ತಹಸೀಲ್ದಾರ ಅವರು ತಿಳಿಸಿದ್ದಾರೆ.

ಮತದಾನ ಕೇಂದ್ರಗಳ ವಿವರ : ಆಯೋಗದ ಮಾರ್ಗಸೂಚಿಗಳನ್ವಯ 16 ಕಿ.ಮೀ. ವ್ಯಾಪ್ತಿಗೊಳಪಡುವ ಕನಿಷ್ಠ 30 ಮತದಾರರು ಒಳಪಡುವ ಮತದಾರರಿಗೆ ಮತಗಟ್ಟೆ ಸ್ಥಾಪಿಸಲು ಅವಕಾಶ ಕಲ್ಪಿಸಿದ್ದು, ಅದರಂತೆ ಪ್ರಸ್ತುತವಾಗಿ ಸುರಪುರ ತಾಲ್ಲೂಕಿನಲ್ಲಿ ಎರಡು ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಅವುಗಳ ಹೆಸರುಗಳು ಭಾಗಸಂಖ್ಯೆ 101 ತಹಸೀಲ್ದಾರವರ ಕಾರ್ಯಾಲಯ ಸುರಪುರ, ಮತ್ತು 103 ಸರಕಾರಿ ಜೂನಿಯರ್ ಕಾಲೇಜು, ಕೆಂಭಾವಿ ಇರುತ್ತವೆ. ನಿರಂತರ ನೊಂದಣಿ ಪ್ರಕ್ರಿಯೆಯಲ್ಲಿ ನೊಂದಾಯಿಸಲ್ಪಡುವ ಮತದಾರ ರಿಗನುಗುಣವಾಗಿ, ಆಯೋಗದ ಮಾರ್ಗಸೂಚಿಗಳನ್ವಯ ಮತದಾನ ಕೇಂದ್ರಗಳನ್ನು ಮುಂದಿನ ದಿನಗಳಲ್ಲಿ ಚುನಾವಣಾ ಸಮಯದಲ್ಲಿ ಅಂತಿಮಗೊಳಿಸಲಾಗುವುದು. ಮನವಿ ಇದೊಂದು ನಿರಂತರ ನೊಂದಣಿ ಪ್ರಕ್ರಿಯೆಯಾಗಿರುವ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆಗೂ ಅರ್ಹ ಮತದಾರರು ಅವಶ್ಯಕ ದಾಖಲೆಗಳೊಂದಿಗೆ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೊಂದಾಯಿಸಿಕೊಳ್ಳಲು ಅವಕಾಶವಿರುತ್ತದೆ.

ಕಾರಣ ಅರ್ಹ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಈ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು, ಸುಭದ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಎಲ್ಲಾ ಅರ್ಹ ಮತದಾರರಲ್ಲಿ ವಿನಂತಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಮುಖಂಡರು ಸಿಹಿ ಹಂಚಿ ಸಂಭ್ರಮ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು:

ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ 2793 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಶಾಸಕ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರು ಅಭಿಮಾನಿಗಳಿಗೆ ಕಾರ್ಯಯಕರ್ತರು ಮುಖಂಡರು. ಸ್ನೇಹಜೀವಿ ಬಳಗ ಯುವ ಮುಖಂಡರು ಸಿಹಿ ಹಂಚಿ ಸಂಭ್ರಮಿಸಿದರು

ಮುಖ್ಯಮಂತ್ರಿಗಳ ಗೃಹ ಕಚೇರಿಗೆ ಭೇಟಿ ನೀಡಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಮಾದಳ್ಳಿ ಉಕ್ಕಿನ ಕಂತೆ ಮಠದ ಮುಖ್ಯದ್ವಾರ (ಬಸವ ಬಾಗಿಲು) ಉದ್ಘಾಟನೆ ಕಾರ್ಯಕ್ರಮ ಮತ್ತು ಹುಣಸೂರು ಕನಕ ಭವನದ ಗಣಪತಿ ದೇವಸ್ಥಾನ ಹಾಗೂ ಕೊಯಮತ್ತೂರು ಕಾಲೋನಿಯ ಕನಕ ಭವನ ಲೋಕಾರ್ಪಣೆ ಕಾರ್ಯಕ್ರಮಗಳಿಗೆ ಆಹ್ವಾನ ನೀಡಿದರು.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ 2793 ದಿನಗಳ ಆಡಳಿತವನ್ನು ನೀಡುವ ಮೂಲಕ ಕರ್ನಾಟಕದ ಸುದೀರ್ಘ ಅವಧಿಯ ಮುಖ್ಯಮಂತ್ರಿಗಳೆಂಬ ಚರಿತ್ರೆ ಸೃಷ್ಠಿಸಿದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಬಡ ವರ್ಗದ ಪಾಲಿಗೆ ವಿವಿಧ ಭಾಗ್ಯಗಳ ಭಾಗ್ಯ ವಿಧಾತ ಎನಿಸಿರುವ ನಿಮ್ಮ ಈ ಸಮಾಜ ಸೇವೆ ಇದೇ ರೀತಿ ಯಶಸ್ಸಿನಿಂದ ಮುಂದುವರಿಯಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಮಾದಳ್ಳಿ ಉಕ್ಕಿನ ಕಂತೆ ಮಠದ ಪರಮಪೂಜ್ಯ ಶ್ರೀ ಸಾಂಬಸದಾಶಿವ ಸ್ವಾಮೀಜಿ, ಹಾಗೂ ಪಕ್ಷದ ಕಾರ್ಯಕರ್ತರು ಅಭಿಮಾನಿಗಳು ಮುಖಂಡರು ಹಾಜರಿದ್ದರು

# ಭಿಕ್ಷಾಟನೆ ನಿರ್ಮೂಲನೆ ಕಾರ್ಯಕ್ರಮ: 16 ಜನ ಭಿಕ್ಷುಕರ ರಕ್ಷಣೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :



ಕೊಪ್ಪಳದ ಶ್ರೀಗವಿಸಿದ್ದೇಶ್ವರ ಜಾತ್ರೆಯ ನಿಮಿತ್ಯ "ಭಿಕ್ಷಾಟನೆ ಮುಕ್ತ ಶ್ರೀಗವಿಸಿದ್ದೇಶ್ವರ ಜಾತ್ರೆ" ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ್, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ-1098, ಶ್ರೀಗವಿಸಿದ್ದೇಶ್ವರ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ, ಮಹಿಳಾ ಧ್ವನಿ ಶಿಕ್ಷಣ ಮತ್ತು ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಘ, ಹೈಬ್ರಿಡ್ ನ್ಯೂಸ್, ಕೊಪ್ಪಳ ಹಾಗೂ ಭಿಕ್ಷುಕರ ಪುರ್ನವಸತಿ ಕೇಂದ್ರ, ಬಳ್ಳಾರಿ ಇವರುಗಳ ಸಂಯುಕ್ತಾಶ್ರಯದಲ್ಲಿ ಭಿಕ್ಷಾಟನೆ ನಿರ್ಮೂಲನೆಗಾಗಿ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಅನಿರೀಕ್ಷಿತ ದಾಳಿಯನ್ನು ಆಯೋಜಿಸಲಾಗಿತ್ತು.

ಈ ದಾಳಿಗೆ ಚಾಲನೆಯನ್ನು ನೀಡಿ, ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ದರಗದ ಅವರು, ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ -1975 ರನ್ವಯ ಯಾರೇ ವ್ಯಕ್ತಿ ಭಿಕ್ಷೆಯನ್ನು ಬೇಡುವುದು ಅಪರಾಧವಾಗಿದೆ.

ಅಂತಹ ವ್ಯಕ್ತಿಗಳನ್ನು ಗುರುತಿಸಿ, ರಕ್ಷಿಸಿ, ನಿರ್ಗತಿಕರ ಪುರ್ನವಸತಿ ಕೇಂದ್ರದಲ್ಲಿರಿಸಿ ಅಗತ್ಯ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ. ಈ ವೆಚ್ಚವನ್ನು ಸ್ಥಳೀಯ ಸರಕಾರಗಳು ಶೇ.3 ಸೆಸ್‌ನ್ನು ಸಂಗ್ರಹಿಸುವ ಮೂಲಕ ಭರಿಸುತ್ತವೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015ರ ಕಲಂ 76ರನ್ವಯ ಮಕ್ಕಳು ಭಿಕ್ಷೆ ಬೇಡುವುದನ್ನು ಮತ್ತು ಮಕ್ಕಳಿಂದ ಭಿಕ್ಷೆ ಬೇಡಿಸುವುದನ್ನು ಹಾಗೂ ಮಕ್ಕಳಿಂದ ಭಿಕ್ಷೆಯನ್ನು ಬೇಡಿಸಿ ಅದರಿಂದ ಬಂದ ಸಂಪನ್ಮೂಲದಿಂದ ಬದುಕುವುದು ಮತ್ತು ಭಿಕ್ಷೆಯ ಉದ್ದೇಶಕ್ಕಾಗಿ ಮಕ್ಕಳ ಅಂಗಾಂಗವನ್ನು ಊನಗೊಳಿಸುವುದು ಸಹ ಶಿಕ್ಷಾರ್ಹ ಅಪರಾಧವಾಗಿದೆ.

ಈ ಕೃತ್ಯಕ್ಕೆ 7 ರಿಂದ 10 ವರ್ಷಗಳ ಜೈಲು ಶಿಕ್ಷೆ ಮತ್ತು ರೂ.1 ಲಕ್ಷ ದಂಡವನ್ನು ವಿಧಿಸಬಹುದಾಗಿದೆ. ಆದ್ದರಿಂದ ಯಾರೇ ವ್ಯಕ್ತಿಗಳು, ಭಿಕ್ಷುಕರಿಗೆ ಮತ್ತು ಮಕ್ಕಳಿಗೆ ಭಿಕ್ಷೆಯನ್ನು ನೀಡದೆ, ಅಂತಹವರನ್ನು ಅರ್ಹ ಪುನರ್ವಸತಿ ಕೇಂದ್ರಗಳಿಗೆ ದಾಖಲಿಸಿ ಅಥವಾ ತುರ್ತು ಸಹಾಯವಾಣಿಗಳಾದ 112 ಅಥವಾ ಮಕ್ಕಳ ಸಹಾಯವಾಣಿ-1098ಗೆ ಮಾಹಿತಿಯನ್ನು ನೀಡಿ ಎಂದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಮಾತನಾಡಿ, ಮಕ್ಕಳು ಭಿಕ್ಷೆ ಬೇಡುವುದನ್ನು ಸರಕಾರವು ನಿಷೇಧಿಸಿದ್ದು, ಇದೊಂದು ಅನಿಷ್ಟ ಪದ್ಧತಿಯಾಗಿದೆ. ಅಂತಹ ಮಕ್ಕಳನ್ನು ಸಹ ಪೋಷಣೆ ಮತ್ತು ರಕ್ಷಣೆ ವ್ಯಾಪ್ತಿಗೆ ಸೇರಿಸಿದೆ. ಇಂತಹ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವ ಮೂಲಕ ಅಗತ್ಯ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ. ಆದ್ದರಿಂದ ಮಕ್ಕಳಿಗೆ ಭಿಕ್ಷೆಯನ್ನು ನೀಡಬೇಡಿ, ಶಿಕ್ಷಣಕ್ಕೆ ಪ್ರೋತ್ಸಾಹಿಸಿ. ಒಂದು ವೇಳೆ ಮಕ್ಕಳು ಭಿಕ್ಷೆ ಬೇಡುತ್ತಿರುವುದು ಕಂಡು ಬಂದಲ್ಲಿ ಅಂತಹ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ ಅಥವಾ ಮಕ್ಕಳ ಸಹಾಯವಾಣಿ-1098/112ಗೆ ಮಾಹಿತಿಯನ್ನು ನೀಡಿ ಎಂದು ತಿಳಿಸಿದರು.

ಈ ವೇಳೆ ಪೊಲೀಸ್ ಉಪಾಧೀಕ್ಷಕ ಮುತ್ತಣ್ಣ ಸವರಗೋಳ, ಭಿಕ್ಷುಕರ ಪುರ್ನವಸತಿ ಕೇಂದ್ರ, ಬಳ್ಳಾರಿಯ ಅಧೀಕ್ಷರಾದ ಚಿನ್ನಪಾಲಯ್ಯ ಮತ್ತು ಸಿಬ್ಬಂದಿಗಳು, ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರಾದ ಶರಣಪ್ಪ ಚೌವ್ಹಾಣ ಮತ್ತು ಸ್ವಯಂ ಸೇವಕರು, ಮಹಿಳಾ ಧ್ವನಿ ಶಿಕ್ಷಣ ಮತ್ತು ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಪ್ರಿಯದರ್ಶಿನಿ ಮುಂಡರಗಿಮಠ, ಹೈಬ್ರಿಡ್ ನ್ಯೂಸ್‌ನ ಸಂಸ್ಥಾಪಕರಾದ ಬಿ.ಎನ್.ಹೊರಪೇಟಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ(ಸಾಂಸ್ಥಿಕ) ರವಿಕುಮಾರ, ಮಕ್ಕಳ ಸಹಾಯವಾಣಿ-1098ನ ಶರಣಪ್ಪ ಸಿಂಗನಾಳ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು. ಈ ವೇಳೆ 16 ಜನ ಭಿಕ್ಷುಕರನ್ನು ರಕ್ಷಿಸಿ ಬಳ್ಳಾರಿ ಪುರ್ನವಸತಿ ಕೇಂದ್ರಕ್ಕೆ ಹಾಜರು ಪಡಿಸಲಾಯಿತು.

# ಮೃತ ರಾಜಶೇಖರ ರೆಡ್ಡಿ ಮನೆಗೆ ಡಿಸಿಎಂ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬ್ಯಾನರ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿ ಗುಂಡಿನ ದಾಳಿಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಅವರ ನಿವಾಸಕ್ಕೆ ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಘಟನೆಯಲ್ಲಿ ನಮ್ಮ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಅವರು ಮೃತಪಟ್ಟಿರುವುದು ಅತ್ಯಂತ ದುಖಃ ತರಿಸಿದೆ. ನಿಮ್ಮ ಕುಟುಂಬದ ಜೊತೆ ನಾವಿದ್ದೇವೆ, ಪಕ್ಷವಿದೆ, ಧೈರ್ಯದಿಂದಿರಿ ಎಂದು ಕುಟುಂಬದ ಸದಸ್ಯರಿಗೆ ಅಭಯ ನೀಡಿದರು. ಈ ವೇಳೆ ಕುಟುಂಬದ ಸದಸ್ಯರು, ಮೃತ ರಾಜಶೇಖರ್ ಅವರ ಸಹೋದರಿ ದುಃಖವನ್ನು ತೋಡಿಕೊಂಡರು. ರಾಜಶೇಖರ್ ತಾಯಿ ಅವರು ಕಿರಿಯ ಪುತ್ರನಿಗೆ ನೌಕರಿ ಕೊಡಿಸಿ ಪುಣ್ಯಕಟ್ಟಿಕೊಳ್ಳಿ ಸರ್, ಜೊತೆಗೆ ವಾಸಿಸಲು ಮನೆ ನಿರ್ಮಾಣ ಮಾಡಿಕೊಡಿ ಎಂದು ಮನವಿ ಮಾಡಿದರು. ನಿಮ್ಮ ಜೊತೆ ನಾವಿದ್ದೇವೆ ಚಿಂತೆ ಬೇಡ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುಬಾರಿ ಸಚಿವ ಜಮೀರ್ ಅಹ್ಮದ್ ಖಾನ್, ರಾಜ್ಯ ಸಭಾ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್, ಸಂಸದ ಈ.ತುಕಾರಾಂ, ಮಾಜಿ ಸಚಿವ, ಶಾಸಕ ಬಿ.ನಾಗೇಂದ್ರ, ನಗರ ಶಾಸಕ ನಾರಾ ಭರತ್ ರೆಡ್ಡಿ, ಕಂಪ್ಲಿ ಶಾಸಕ ಜೆ.ಎನ್.ಗಣೇಶ್, ಸಿರುಗುಪ್ಪ ಶಾಸಕ ಬಿ.ಎಂ.ನಾಗರಾಜ್, ಸಂಡೂರು ಶಾಸಕಿ ಅನ್ನಪೂರ್ಣ ತುಕಾರಾಂ, ಸ್ಥಳೀಯ ಪಾಲಿಕೆ ಸದಸ್ಯ ವಿವೇಕ್, (ವಿಕ್ಕಿ), ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಸೇರಿದಂತೆ ಇತರರಿದ್ದರು.

# ಅಕ್ಕಪಡೆ ವಿಶೇಷ ಯೋಜನೆಗೆ ಚಾಲನೆ: ಲಕ್ಷ್ಮಣ ಕಡೇಮನಿ

ಮಲ್ಲಮ್ಮ ನುಡಿ ವಾರ್ತೆ



ಕೊಪ್ಪಳ: ಅಪಾಯಕ್ಕೆಸಿಲುಕಿರುವ ಮಹಿಳೆಯರು, ಮಕ್ಕಳ ರಕ್ಷಣೆಗಾಗಿ 2023 ರಲ್ಲಿ ಜಾರಿಗೆ ತಂದ 'ಅಕ್ಕಪಡೆ' ವಿಶೇಷ ಯೋಜನೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿದೆ. ಆಪತ್ಕಾಲದಲ್ಲಿ ತಕ್ಷಣದ ನೆರವು ಕಲ್ಪಿಸುವ ಉದ್ದೇಶದಿಂದ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ಕಪಡೆ ಸ್ಥಾಪಿಸಲಾಗುತ್ತಿದೆ. ಅದರಂತೆ ಕೊಪ್ಪಳ ಜಿಲ್ಲೆಯಲ್ಲಿ ಜನವೇರಿ-5 ರಂದು ಕೊಪ್ಪಳದ ಗವಿಸಿದ್ದೇಶ್ವರ ಜಾತ್ರಾಮಹೋತ್ಸವದಲ್ಲಿ ಅಕ್ಕಪಡೆ ವಿಶೇಷ ಯೋಜನೆಗೆ ಕೊಪ್ಪಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಸಂಸದರು, ಉಸ್ತುವಾರಿ ಸಚಿವರು, ಕೊಪ್ಪಳ ಶಾಸಕರು ಚಾಲನೆ ನೀಡಿದರು ಎಂದು ಗೃಹರಕ್ಷಕ ದಳದ ಜಿಲ್ಲಾ ಸಮಾಧೇಷ್ಠರಾದ ಲಕ್ಷ್ಮಣ ಕಡೇಮನಿ ತಿಳಿಸಿದರು.

ಈ ಅಕ್ಕಪಡೆಯನ್ನು ಗೃಹರಕ್ಷಕ ದಳದ ಗೃಹರಕ್ಷಕಿಯರು, ಮಹಿಳಾ ಪೊಲೀಸ್ ಸಿಬ್ಬಂದಿಗಳು, ಎನ್.ಸಿ.ಸಿ., ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಹಿಳಾ ನೌಕರರ ಮೂಲಕ ಚಾಲನೆಗೆ ತರಲಾಗಿದ್ದು, ಈ ಅಕ್ಕಪಡೆಯು ಮಹಿಳೆಯರ ತುರ್ತು ಸಮಸ್ಯೆಗಳಿಗಾಗಿ. ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯಗಳ ವಿರುದ್ಧ ಕಾರ್ಯನಿರ್ವಹಿಸುವ ಒಂದು ವಿಶೇಷ ಯೋಜನೆಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗೃಹರಕ್ಷಕ ದಳದ ಸಿ.ಸಿ ಕಮಾಂಡರ್ ಆದ ವೀರಣ್ಣ ಬಡಿಗೇರ್ ಮಾತನಾಡಿ. ಈ ಅಕ್ಕಪಡೆ ವಿಶೇಷ ಯೋಜನೆಯು ಹೆಣ್ಣು ಮಕ್ಕಳ ಜನಜಾಗೃತಿ ಯೋಜನೆಯಾಗಿದ್ದು, ವಿದ್ಯಾರ್ಥಿಗಳು ಮತ್ತು ಮಹಿಳೆಯರಲ್ಲಿ ಬಾಲ್ಯವಿವಾಹ ನಿಷೇಧ, ಪೋಸ್ಕೋ ಕಾಯ್ದೆ, ದೇವದಾಸಿ ನಿರ್ಮೂಲನಾ ಪದ್ಧತಿ, ಬಾಲಕಾರ್ಮಿಕ ನಿರ್ಮೂಲನಾ ಪದ್ಧತಿ. ಮಹಿಳಾ ಸುರಕ್ಷತೆ ಮತ್ತು ಮೊಬೈಲ್ ಸುರಕ್ಷತಾ ನಿಯಮಗಳ ಕುರಿತು ಅರಿವು ಮೂಡಿಸಲಾಗುವುದು, ಮಹಿಳಾ ಸಹಾಯವಾಣಿ 1098, 112 ಮತ್ತು 19036 ಗಳಂತಹ ಸಹಾಯವಾಣಿಗಳ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. ಈ ಅಕ್ಕಪಡೆಯು ಬಸ್ ನಿಲ್ದಾಣಗಳು, ಶಾಲೆಗಳು, ಕಾಲೇಜುಗಳು, ವಸತಿ ನಿಲಯಗಳು, ಮಾರುಕಟ್ಟೆ, ಉದ್ಯಾನವನಗಳು, ದೇವಾಲಯಗಳಂತ ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಾಚರಣೆ ಮಾಡಲಿದೆ. ದೌರ್ಜನ್ಯಕ್ಕೊಳಾಗದ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣ ಅಕ್ಕಪಡೆ ಬೆಂಬಲ ನೀಡಲಿದೆ. ಸಹಾನುಭೂತಿ, ಸೇವಾ ಮನೋಭಾವ, ಸಮಾಜದ ಮುಖ್ಯಚಿಂತನೆ ಹೊಂದಿರುವ ಮಹಿಳೆಯರಿಗೆ ಒಂದು ವೇದಿಕೆ ಕಲ್ಪಿಸುವುದು, ಸಮಾಜದಲ್ಲಿ ಸಮಾನತೆ ಮತ್ತು ಶಿಕ್ಷಣದ ಕಿರುಸೇತುವೆಯಾಗಿ ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಡುವುದಕ್ಕೆ ಅಕ್ಕಪಡೆ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು, ಅಕ್ಕಪಡೆಯ ಸದಸ್ಯರುಗಳು ಹಾಗೂ ಗೃಹರಕ್ಷಕಿಯರಾದ ಯಲ್ಲಮ್ಮ, ಯಂಕಮ್ಮ, ನಾಗರತ್ನಮ್ಮ, ಭಾಗ್ಯ, ಮಂಜುಳಾ ಕಮ್ಮಾರ, ಪತ್ರಕರ್ತೆ ಸರಸ್ವತಿ ನಾಗರಾಜ ಸೇರಿದಂತೆ ಗೃಹರಕ್ಷಕ ದಳದ ಇನ್ನಿತರ ಸಿಬ್ಬಂದಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ಹಿಪ್ಪರಗಿ ಬ್ಯಾರೇಜ್ ಗೇಟ್ ಮುರಿದು ನೀರು ಪೋಲು




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಜಮಖಂಡಿ ತಾಲೂಕಿನ ಕೃಷ್ಣಾ ನದಿಗೆ ನಿರ್ಮಿಸಿರುವ ಹಿಪ್ಪರಗಿ ಬ್ಯಾರೇಜಿನ ನೀರಿನ ಒತ್ತಡಕ್ಕೆ 22ನೇ ಗೇಟ್ ಮುರಿದ ಪರಿಣಾಮ ಬ್ಯಾರೇಜನಲ್ಲಿ ಸಂಗ್ರಹಗೊಂಡಿದ್ದ ಅಪಾರ ಪ್ರಮಾಣದ ನೀರು ಪೋಲಾಗಿರುವ ಘಟನೆ ಮಂಗಳವಾರ ನಡೆದಿದೆ.

ಮುಂಜಾನೆ 11.30 ರ ವೇಳೆಗೆ ಬ್ಯಾರೇಜಿನ 22ನೇ ಗೇಟಿನ ಕೆಳಭಾಗ ನೀರಿನ ಒತ್ತಡದಿಂದ ಮುರಿದಿದೆ. ತಕ್ಷಣ ಎಚ್ಚೆತ್ತ ನೀರಾವರಿ ಇಲಾಖೆ ಅಧಿಕಾರಿಗಳ ತಂಡ ಗೇಟ್ ಅಳವಡಿಕೆಯ ವಿಶೇಷ ತಜ್ಞರು, ಸಿಬ್ಬಂದಿಗಳೊಂದಿಗೆ ಗೇಟ್ ಅಳವಡಿಕೆ ಕಾರ್ಯದಲ್ಲಿ ತೊಡಗಿದ್ದಾರೆ.

ಬ್ಯಾರೇಜಿನಲ್ಲಿ ಸಂಗ್ರಹಗೊಂಡಿರುವ ನೀರಿನ ಪ್ರಮಾಣದಲ್ಲಿ ಸುಮಾರು ಆರೇಳು ಇಂಚಿನಷ್ಟು ನೀರು ಪೋಲಾಗಿರುವುದು ಕಂಡು ಬಂದಿದ್ದು, ಗೇಟ್ ಹಾನಿಯಿಂದಾಗಿ 1 ಟಿಎಂಸಿಯಷ್ಟು ನೀರು ಪೋಲಾಗುವ ಸಂಭವವಿದೆಯೆಂದು ಅಧಿಕಾರಿಗಳ ತಂಡ ತಿಳಿಸಿದೆ.

ಮಾಹಿತಿ ತಿಳಿದು ಘಟನಾ ಸ್ಥಳಕ್ಕೆ ರಬಕವಿ–ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗೇಟಿನ ಕೆಳಭಾಗದ ಪ್ಲೇಟ್ ಮುರಿದ ಪರಿಣಾಮ ನೀರು ಪೋಲಾಗುವಿಕೆಗೆ ಕಾರಣವಾಗಿದ್ದು, ಸಂಜೆಯವರೆಗೆ ಸರಿಪಡಿಸಲಾಗುವುದೆಂದು ಅವರು ತಿಳಿಸಿದರು. ನುರಿತ ಕಾರ್ಮಿಕರಿಂದ ಗೇಟ್ ಅಳವಡಿಕೆ ಕಾರ್ಯ ಭರದಿಂದ ಸಾಗುತ್ತಿದೆಯೆಂದರು.

ಬ್ಯಾರೇಜಿನಲ್ಲಿ 6 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವಿದ್ದು, ಗೇಟ್ನ ಪ್ಲೇಟ್ ಅಳವಡಿಕೆ ತ್ವರಿತವಾಗಿ ನಡೆಯುತ್ತಿದೆ. ಅದೃಷ್ಟವಶಾತ್ ಬ್ಯಾರೇಜಿನಲ್ಲಿ ನಿಂತ ನೀರು ಪೋಲಾಗಿರುವುದರಿಂದ ನೀರಿನ ಒತ್ತಡ ಕಡಿಮೆ ಕಾರಣ ಯಾವುದೇ ಅನಾಹುತಗಳು ಸಂಭವಿಸಿಲ್ಲ. ಹಿರಿಯ ಅಧಿಕಾರಿಗಳ ತಂಡ ಸ್ಥಳದಲ್ಲಿ ಬೀಡು ಬಿಟ್ಟಿದ್ದು, ನೀರು ಪೋಲಾಗುವುದನ್ನು ತಡೆಯಲು ಮತ್ತು ಬ್ಯಾರೇಜಿನ ಸುರಕ್ಷತೆ ಖಚಿತಪಡಿಸಿಕೊಳ್ಳಲು ಶ್ರಮಿಸುತ್ತಿದ್ದಾರೆ.

ಸಂಜೆಯೊಳಗಾಗಿ ಗೇಟ್ ದುರಸ್ತಿ ಕಾರ್ಯ ಪೂರ್ಣಗೊಳ್ಳುವ ಭರವಸೆಯಿದೆ ಎಂದು ಅಧಿಕಾರಿಗಳ ತಂಡ ಸ್ಪಷ್ಟಪಡಿಸಿದೆ. ಗೇಟ್ ಪ್ಲೇಟ್ ಯಾವ ಕಾರಣಕ್ಕೆ ಮುರಿದಿದೆ ಎಂಬುದು ಇನ್ನೂ ತಿಳಿದು ಬಂದಿಲ್ಲ. ತಾಂತ್ರಿಕ ಅಧಿಕಾರಿಗಳ ಪರಿಶೀಲನೆ ನಂತರ ಸ್ಪಷ್ಟ ಮಾಹಿತಿ ದೊರೆಯಲಿದೆ.

# ಜಾತ್ರೆಗಳಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ: ಬಾಬು



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಾತ್ರೆ, ಹಬ್ಬ ಉತ್ಸವಗಳಲ್ಲಿ ಸಾರ್ವಜನಿಕರು ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಮೂಲಕ ವಾಂತಿ–ಭೇದಿ ಪ್ರಕರಣಗಳು ಸಂಭವಿಸದಂತೆ ಮುಂಜಾಗ್ರತೆ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಸಂಡೂರು ತಾಲ್ಲೂಕಿನ ಬಂಡ್ರಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಡಿ.ಮಲ್ಲಾಪುರ ಉಪಕೇಂದ್ರದ ಅಂಕಮನಹಾಳ್ ಗ್ರಾಮದಲ್ಲಿ ನಡೆಯುವ ಜಾತ್ರಾ ಹಿನ್ನಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿ ಅವರು ಮಾತನಾಡಿದರು.

ಸಾರ್ವಜನಿಕರು ಮುಂಜಾಗ್ರತೆಗಾಗಿ ಊಟದ ಮೊದಲು ಮತ್ತು ನಂತರ ಕೈಗಳನ್ನು ಸಾಬೂನು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದುಕೊಂಡ ನಂತರ ಆಹಾರ ಸೇವಿಸಿಬೇಕು. ತೆರೆದಿಟ್ಟ ಆಹಾರ, ಹಳೆಯ ಅಥವಾ ಹೆಚ್ಚು ಎಣ್ಣೆಯುಕ್ತ ಪದಾರ್ಥಗಳನ್ನು ತಪ್ಪಿಸಿ ಬಾಟಲ್ ನೀರು ಅಥವಾ ಕುದಿಸಿದ ನೀರನ್ನೇ ಕುಡಿಯಲು ಬಳಸಬೇಕು ಎಂದರು.

ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ತಂಗಳು ಆಹಾರವನ್ನು ಸೇವಿಸದೇ ಬಿಸಿಯಾದ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಬೇಕು. ಮನೆಯ ಸುತ್ತಲೂ ಸ್ವಚ್ಛತೆ ಕಾಪಾಡಿಕೊಂಡು ನೊಣ ಉಂಟಾಗಂದತೆ ನೋಡಿಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ವಿನಂತಿಸಿದರು.

ಹವಾಮಾನದಿಂದ ರಕ್ಷಣೆ ಹೊಂದಿ: ಬಿಸಿಲು ಹೆಚ್ಚಿದ್ದರೆ ಟೋಪಿ/ಛತ್ರಿ ಬಳಸಿ ಸಾಕಷ್ಟು ನೀರು ಕುಡಿದು ದೇಹದ ನೀರಿನ ಕೊರತೆ ಆಗದಂತೆ ನೋಡಿಕೊಳ್ಳಬೇಕು. ಆರೋಗ್ಯ ಸಮಸ್ಯೆಗಳಿದ್ದರೆ ಅಗತ್ಯ ಔಷಧಿಗಳನ್ನು ಜೊತೆಗೆ ತೆಗೆದು–ಕೊಂಡು ಹೋಗಬೇಕು. ಅಸ್ವಸ್ಥತೆ ಇದ್ದರೆ ವಿಶ್ರಾಂತಿ ತೆಗೆದುಕೊಳ್ಳಬೇಕು ಅಥವಾ ವೈದ್ಯರನ್ನು ಸಂಪರ್ಕಿಬೇಕು. ಜ್ವರ, ಕೆಮ್ಮು ಇದ್ದರೆ ಮಾಸ್ಕ್ ಧರಿಸಿ ಅನಾವಶ್ಯಕವಾಗಿ ಮುಖ ಮುಟ್ಟುವುದನ್ನು ತಪ್ಪಿಸಿ ಎಂದು ಹೇಳಿದರು.

# ಮೆಕ್ಕೆಜೋಳ ಖರೀದಿಗೆ ಸಚಿವ ತಿಮ್ಮಾಪೂರ ಚಾಲನೆ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಪ್ರಸಕ್ತ ಸಾಲಿನ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಗೋವಿನಜೋಳ ಖರೀದಿಯ ನೋಂದಣಿ ಕಾರ್ಯಕ್ಕೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಮಂಗಳವಾರ ಚಾಲನೆ ನೀಡಿದರು.

ಮುಧೋಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು ಸರ್ಕಾರದ ಆದೇಶದನ್ವಯ ಪ್ರಸಕ್ತ ಸಾಲಿಗೆ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳವನ್ನು ಎ.ಪಿ.ಎಂ.ಸಿ ಮಾರುಕಟ್ಟೆಗಳಲ್ಲಿ ಆಗುವ ವಹಿವಾಟಿನ ಧಾರಣೆಯ ಆಧಾರದ ಮೇಲೆ ರೈತರಿಗೆ ಬೆಲೆ ವ್ಯತ್ಯಾಸದ ಮೊತ್ತವನ್ನು ಡಿಬಿಟಿ ಮುಖಾಂತರ ಬ್ಯಾಂಕ ಖಾತೆಗೆ ಪಾವತಿಸಲಾಗುತ್ತದೆ ಎಂದು ತಿಳಿಸಿದರು.

ಮಾರುಕಟ್ಟೆ ಮಧ್ಯಪ್ರವೇಶದ ದರ ಪ್ರತಿ ಕ್ವಿಂಟಲ್‌ಗೆ ಗರಿಷ್ಟ 2150 ರೂ.ಗಳನ್ನು ನಿಗದಿಪಡಿಸಿದೆ. ಪ್ರತಿ ಎಕರೆಗೆ 12 ಕ್ವಿಂಟಲ್‌ನಂತೆ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಾಗುವ ರೈತರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕನುಗುಣವಾಗಿ ಗರಿಷ್ಟ 50 ಕ್ವಿಂಟಲ್‌ಗೆ ಮಿತಿಗೊಳಿಸಲಾಗಿದೆ. ಮಾರುಕಟ್ಟೆ ಧಾರಣೆ ಪ್ರತಿ ಕ್ವಿಂಟಲ್‌ಗೆ 1900 ರೂ. ಅಥವಾ ಅದಕ್ಕಿಂತ ಕಡಿಮೆ ದರದಲ್ಲಿ ಮಾರಾಟವಾದರೆ ಪ್ರತಿ ಕ್ವಿಂಟಲ್ಲಿಗೆ ಗರಿಷ್ಟ 250 ರೂ.ಗಳಂತೆ ಪಾವತಿಸಲಾಗುತ್ತದೆ. ಮಾರುಕಟ್ಟೆ ಧಾರಣೆ ಪ್ರತಿ ಕ್ವಿಂಟಲ್‌ಗೆ 1950 ರೂ.ಗಂತೆ ಮಾರಾಟವಾದಲ್ಲಿ ವ್ಯತ್ಯಾಸದ ಮೊತ್ತ 200 ರೂ.ಗಳಂತೆ ಪ್ರತಿ ಕ್ವಿಂಟಲ್ಲಿಗೆ ಪಾವತಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಮಾರುಕಟ್ಟೆ ಧಾರಣೆ ಪ್ರತಿ ಕ್ವಿಂಟಲ್‌ಗೆ 2000 ರೂ.ಗಳಂತೆ ಮಾರಾಟವಾದಲ್ಲಿ ವ್ಯತ್ಯಾಸದ ಮೊತ್ತ 150 ರೂ.ಗಳಂತೆ ಪ್ರತಿ ಕ್ವಿಂಟಲಗೆ ಪಾವತಿಸಲಾಗುತ್ತದೆ. ಮಾರುಕಟ್ಟೆ ಧಾರಣೆ ಪ್ರತಿ ಕ್ವಿಂಟಲ್‌ಗೆ 2100 ರೂ.ಗಳಂತೆ ಮಾರಾಟವಾದಲ್ಲಿ ವ್ಯತ್ಯಾಸದ ಮೊತ್ತ 50 ರೂ.ಗಳಂತೆ ಪಾವತಿಸಲಾಗುತ್ತದೆ. ಮಾರುಕಟ್ಟೆ ಧಾರಣೆ ಪ್ರತಿ ಕ್ವಿಂಟಲ್‌ಗೆ 2150 ರೂ. ಅಥವಾ ಅದಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟವಾದಲ್ಲಿ ಯೋಜನೆಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತಿಮ್ಮಾಪೂರ ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಈಗಾಗಲೇ ಎಥೆನಾಲ್ ಉತ್ಪಾದನೆಗಾಗಿ ಹಾಗೂ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಕ್ಕೆ ಅವಶ್ಯವಿರುವ ಮೆಕ್ಕೆಜೋಳ ಪೂ–ರೈಕೆ ಮಾಡಿರುವ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ. ಸದರಿ ಯೋಜನೆಯ ಅನುಷ್ಠಾನ ಅವಧಿಯು ಮೆಕ್ಕೆಜೋಳ ಉತ್ಪನ್ನದ ಮೊದಲ ವಹಿವಾಟು ಯುಎಂಪಿ ತಂತ್ರಾಂಶದಲ್ಲಿ ಆಗುವ ದಿನಾಂಕದಿಂದ ಒಂದು ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ ಎಂದರು.

ಈ ಯೋಜನೆಯ ಪ್ರಯೋಜನ ಪಡೆಯಲು ಬಾಗಲಕೋಟೆ ಜಿಲ್ಲೆಯ ಎಲ್ಲಾ ರೈತ ಬಾಂಧವರು ನೋಂದಣಿ ಸ್ಥಳಗಳಲ್ಲಿ ಆಧಾರ ಕಾರ್ಡ, ಫ್ರೂಟ್ಸ್ ಗುರುತಿನ ಸಂಖ್ಯೆಯೊಂದಿಗೆ ಎನ್.ಇ.ಎಂ.ಎಲ್ ತಂತ್ರಾಂಶದಲ್ಲಿ ಬಯೋಮೆಟ್ರಿಕ ಮೂಲಕ ನೋಂದಣೆ ಮಾಡಿಸಿಕೊಂಡು ಎಪಿಎಂಸಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಯು–ಎಂಪಿ ವೇದಿಕೆಯಲ್ಲಿ ಮೆಕ್ಕೆಜೋಳ ಮಾರಾಟ ಮಾಡಲು ರೈತರಲ್ಲಿ ಮನವಿ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ರುದ್ರೇಶ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಜಂಟಿ ತೋಟಗಾರಿಕೆ ನಿರ್ದೇಶಕ ರವೀಂದ್ರ ಹಕಾಟಿ, ಮುಧೋಳ ಕೃಷಿ ಮಾರುಕಟ್ಟೆ ಸಮಿತಿಯ ಅಧ್ಯಕ್ಷ ಸಂಗಪ್ಪ ಇಮ್ಮನ್ನವರ, ಉಪಾಧ್ಯಕ್ಷ ಭೀಮಪ್ಪ ರಾಮಪ್ಪ ಮೇಟಗುಡ್ಡ, ಸದಸ್ಯರಾದ ಮಲ್ಲಪ್ಪ ರಾಮಪ್ಪ ಮಂಟೂರ, ವೆಂಕಟೇಶ ಅಂಕಲಗಿ, ಲಕ್ಕಪ್ಪ ಹಂಚಿನಾಳ, ಸೋಮಪ್ಪ ಹೊಟ್ಟೆಪ್ಪನವರ, ಪಾಂಡುರಂಗ ಹೂವನ್ನವರ, ದಾನಪ್ಪ ಕವಳ್ಳಿ, ಪ್ರಕಾಶ ತಳಗೇರಿ, ಶಿವಾನಂದ ಉದುಪುಡಿ, ಸದುಗೌಡ ಪಾಟೀಲ, ದುಂಡಪ್ಪ ಭರಮನಿ ರೈತರಾದ ಮುತ್ತಪ್ಪ ಚೌಧರಿ, ಕೊರಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಎಪಿಎಂಸಿ ಪ್ರಾಂಗಣ ಬಾಗಲಕೋಟೆ (9448100779), ಬಾದಾಮಿ (9164794469), ಜಮಖಂಡಿ (8904218149), ಬೀಳಗಿ (9035353912), ಮುಧೋಳ (7892640540), ಮಹಾಲಿಂಗಪುರ (7892640540), ಹುನಗುಂದ (9972841315), ಇಳಕಲ್ಲ (9901439616) ಖರೀದಿ ಕೇಂದ್ರಗಳಾಗಿವೆ.**

# ಜಿಲ್ಲಾ ಹೂಗಾರ ಸಂಘಕ್ಕೆ ಹನಮಂತ ಹೂಗಾರ ಅಧ್ಯಕ್ಷ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,6–ಜಿಲ್ಲಾ ಹೂಗಾರ, ಗುರವ, ಜೀರ್, ತಾಂಬೋಳಿ ಸಮಾಜದ ಸಂಘದ ನೂತನ ಅಧ್ಯಕ್ಷರಾಗಿ ಹನಮಂತ ಹೂಗಾರ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಪ್ರವೀಣ ಗುರವ ಆಯ್ಕೆಯಾಗಿದ್ದಾರೆ.

ನಗರದ ವಿದ್ಯಾಗಿರಿಯ ಸಾಯಿ ಮಂದಿರದಲ್ಲಿ ಜರುಗಿದ ಜಿಲ್ಲಾ ಹೂಗಾರ ಸಮಾಜ ಬಾಂಧವರ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆದು ಗೌರವಾಧ್ಯಕ್ಷರಾಗಿ ಎಂ.ಬಿ.ಹೂಗಾರ, ಉಪಾಧ್ಯಕ್ಷರಾಗಿ ಹನಮಂತ ಹೂಗಾರ, ಖಜಾಂಚಿಯಾಗಿ ಜಗನ್ನಾತ ಹೂಗಾರ ಹಾಗೂ ಬಸವರಾಜ ಹೂಗಾರ ಆಯ್ಕೆಯಾಗಿದ್ದು, ಸಲಹಾ ಸಮಿತಿಯ ಸಲಹೆಗಾರರಾಗಿ ಹನಮಂತ ಹೂಗಾರ (ಬಾಡಗಿ) ಅವರನ್ನು ನೇಮಕ ಮಾಡಲಾಗಿದೆ.

ನೂತನ ಜಿಲ್ಲಾ ಅಧ್ಯಕ್ಷ ಹನಮಂತ ಹೂಗಾರ ಮಾತನಾಡಿ, ಸಮಾಜದ ಅಭಿವೃದ್ಧಿಗೆ, ಸಂಘಟಣೆಗೆ ಪ್ರಮಾಣಿಕವಾಗಿ ಕಾರ್ಯಮಾಡುವೆ ಇದಕ್ಕೆ ಸರ್ವ ಸಮಾಜ ಬಾಂಧವರ ಸಹಕಾರ ಅಗತ್ಯ ಎಂದರು.

ಬಾಗಲಕೋಟ, ಬೀಳಗಿ, ಜಮಖಂಡಿ, ಇಲಕಲ್ಲ, ರಬಕವಿ–ಬನಹಟ್ಟಿ, ತೇರದಾಳ, ಹುನಗುಂದ ಹಾಗೂ ಇಲಕಲ್ಲ ತಾಲೂಕಿನ ಸಿದ್ದಪ್ಪ ಹೂಗಾರ, ಶಾಸಪ್ಪ ಹೂಗಾರ, ಬಸಪ್ಪ ಗುರವ, ಶಿವಲಿಂಗಪ್ಪ ಹೂಗಾರ, ತಿಪ್ಪಣ್ಣ ಹೂಗಾರ, ಗಿರಿಮಲ್ಲಪ್ಪ ಹೂಗಾರ, ಪ್ರಭು ಹೂಗಾರ ಹಾಗೂ ಸಕ್ರಪ್ಪ ಹೂಗಾರ, ಶರಣಪ್ಪ ಹೂಗಾರ, ಹನಮಂತ ಪೂಜಾರಿ, ಯಮನಪ್ಪ ಹೂಗಾರ, ಹನಮಂತ ಹೂಗಾರ, ಶಂಕರ ಹೂಗಾರ ಸೇರಿದಂತೆ ಜಿಲ್ಲೆಯ ಹೂಗಾರ ಸಮಾಜದ ಪ್ರಮುಖರು ಇದ್ದರು.

# ಕಸಾಪ ವತಿಯಿಂದ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ

• **ಮಲ್ಲಮ್ಮ ನುಡಿ ವಾರ್ತೆ ಔರಾದ್:**

ಫೆಬ್ರವರಿ 4ರಂದು ಕಸಾಪ ವತಿಯಿಂದ ತಾಲೂಕು ಮಟ್ಟದ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಬಿ.ಎಂ ಅಮರವಾಡಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಔರಾದ್ ತಾಲೂಕು ಮಟ್ಟದ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಪಟ್ಟಣದ ಗುರುಪಾದಪ್ಪನಾಗಮಾರಪಳ್ಳಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ.



ಇತ್ತೀಚಿಗೆ ಕನ್ನಡ ಭವನದಲ್ಲಿ ತಾಲೂಕಿನ ವಿವಿಧ ಕನ್ನಡಪರ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಅಧ್ಯಕ್ಷರು ಹಾಗೂ ಕಸಾಪ ಪದಾಧಿಕಾರಿಗಳ ಸಭೆಯಲ್ಲಿ ಸಮ್ಮೇಳನದ ಕುರಿತು ಚರ್ಚಿಸಲಾಗಿತ್ತು. ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕನ್ನಡಪರ ಹೋರಾಟಗಾರರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಗಡಿಯಲ್ಲಿ ಮತ್ತೊಮ್ಮೆ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲಾಗುವುದು ಎಂದ ಅವರು, ಶೀಘ್ರದಲ್ಲೇ ಕಸಾಪ ಪದಾಧಿಕಾರಿಗಳ ಸಭೆ ಕರೆದು ಏಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಹೆಸರು ಘೋಷಣೆ ಮಾಡಲಾಗುವುದು ಎಂದು ಹೇಳಿದ್ದಾರೆ.

# ಜ.15 ಹರಿಹರದಲ್ಲಿ ಹರಜಾತ್ರಾ ಮಹೋತ್ಸವ: ವಚನಾನಂದಶ್ರೀ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಜ.15 ರಂದು ಬೆಳಿಗ್ಗೆ 10ಕ್ಕೆ ಹರಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ತಿಳಿಸಿದರು.

ನವನಗರದ ಎಂ.ಆರ್.ಎನ್ ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಜಾತ್ರಾ ಮಹೋತ್ಸವದ ಅಂಗವಾಗಿ ಕಿತ್ತೂರು ರಾಣಿ ಚನ್ನಮ್ಮ ದ್ವಿಶತಮಾನ ವಿಜಯೋತ್ಸವ ಸಮಾರೋಪ ಸಮಾರಂಭ, ಪಂಚಮಸಾಲಿ ಜಗದ್ಗುರು ಲಿಂ. ಡಾ.ಮಹಾಂತ ಶಿವಾಚಾರ್ಯ ಸ್ವಾಮೀಜಿಗಳ 13ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ತಮ್ಮ 8ನೇ ವಾರ್ಷಿಕ ಪೀಠಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಿತ್ತೂರು ರಾಣಿ ಚನ್ನಮ್ಮ ದ್ವಿಶತಮಾನ ವಿಜಯೋತ್ಸವದ ಹಿನ್ನೆಲೆಯಲ್ಲಿ ಈ ವರ್ಷದ ಹರಜಾತ್ರೆಯಿಂದ ಸಮಾಜದ ಮಹಿಳೆಗೆ ಚನ್ನಮ್ಮ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದ್ದು, ಪ್ರಶಸ್ತಿ ನಗದು ಬಹುಮಾನವನ್ನು ಹೊಂದಿದೆ. ಜ.10 ರಂದು ಯಾರಿಗೆ ಪ್ರಶಸ್ತಿ ನೀಡಲಾಗುತ್ತದೆ ಎಂಬುವುದನ್ನು ಬಹಿರಂಗಗೊಳಿಸಲಾಗುತ್ತದೆ ಎಂದು ಹೇಳಿದರು. ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ದೊರಕಿಸುವಲ್ಲಿ ನಮ್ಮ ಹಾಗೂ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿಗಳ ನಿಲುವು ಒಂದೇ ಇದೆ. 2ಬಿ ಮೀಸಲಾತಿಯನ್ನು ಹೆಚ್ಚಿಸಿ, 2ಡಿ ಹಾಗೂ 2ಸಿ ನೀಡಿದ್ದರೆ ಅನುಕೂಲವಾಗುತ್ತಿತ್ತು. ನಮ್ಮ ಹಕ್ಕಿಗೆ ಕಾನೂನಾತ್ಮಕವಾಗಿ ಹೋರಾಟ ಮಾಡಿದಾಗ ಮಾತ್ರ ನಮ್ಮ ಗುರಿ ತಲುಪಲು ಸಾಧ್ಯ ಎಂದು ಸ್ವಾಮೀಜಿ ಹೇಳಿದರು. ಹರಜಾತ್ರಾ ಮಹೋತ್ಸವ ಅಧ್ಯಕ್ಷ ಡಾ.ಬಸವರಾಜ ವೀರಾಪುರ, ಸಮುದಾಯದ ಮುಖಂಡರಾದ ರವಿಕುಮಾರ ಪಟ್ಟಣದ, ಲಕ್ಷ್ಮಣ ನಂದ್ಯಾಳ, ವಿರುಪಾಕ್ಷ ಬೆಟಗೇರಿ, ಮಲ್ಲಿಕಾರ್ಜುನ ಸಕ್ರೋಜಿ, ಶಂಕರಣ ಅರಶಿಣಗೋಡಿ, ಆರ್.ಬಿ.ಶೀಲವಂತ ಹಾಗೂ ಆನಂದ ಕೊಟಗಿ ಸೇರಿ ಇತರರಿದ್ದರು.

# 8 ರಂದು ಕಾರ್ಯಾಗಾರ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ತೋಟಗಾರಿಕೆ ವಿವಿಯ ಸಹಯೋಗದಲ್ಲಿ ಜನವರಿ 8 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆವರೆಗೆ ಒಂದು ದಿನ ಐ.ಎ.ಎಸ್, ಕೆ.ಎ.ಎಸ್ ಕಾರ್ಯಾಗಾರವನ್ನು ತೋವಿವಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ಯಾವುದೇ ಪದವೀಧರರು ಗೂಗಲ್ ಫಾರ್ಮ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಐ.ಎ.ಎಸ್, ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳಿಗೆ ನವನಗರದ ಬಸ್ ನಿಲ್ದಾಣದಿಂದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವರೆಗೆ ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–295210, ಮೊನಂ.9464448728, 8147111236, 6362700132ಗೆ ಸಂಪರ್ಕಿಸುವಂತೆ ಜಿಲ್ಲಾ ಕೌಶಲ್ಯಾಧಿಕಾರಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಯಂತಿಗಳ ಪೂರ್ವಭಾವಿ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯಲ್ಲಿ ಜನವರಿ 14 ರಂದು ಆಚರಿಸಲ್ಪಡುವ ಶಿವಯೋಗಿ ಸಿದ್ದರಾಮ ಜಯಂತಿ, 19 ರಂದು ಮಹಾಯೋಗಿ ವೇಮನ ಜಯಂತಿ, 21 ರಂದು ಅಂಬಿಗರ ಚೌಡಯ್ಯ ಜಯಂತಿ ಹಾಗೂ 25 ರಂದು ಸವಿತಾ ಮಹರ್ಷಿ ಜಯಂತಿಗಳನ್ನು ಆಚರಿಸುವ ಕುರಿತು ಚರ್ಚಿಸಲು ಜನವರಿ 7 ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಎಂ ಅವರ ದಾಖಲೆ ಪ್ರಯುಕ್ತ ಉಚಿತ ಆಹಾರ ಕಿಟ್ಟು ಹಣ್ಣು ವಿತರಣೆ



• **ಮಲ್ಕನ ನುಡಿ ವಾರ್ತೆ ಮಸ್ಕಿ :**

ಕರ್ನಾಟಕ ಇತಿಹಾಸದಲ್ಲಿ ಮೊಟ್ಟ ಮೊದಲಿಗೆ ಅತಿ ಹೆಚ್ಚು ದಿನಗಳ ಕಾಲ ಮುಖ್ಯಮಂತ್ರಿಯಾಗಿ ದಾಖಲೆ ಮಾಡಿದ ಸಿಎಂ ಸಿದ್ದರಾಮಯ್ಯ ಅವರ ದಾಖಲೆ ಪ್ರಯುಕ್ತ ಮಸ್ಕಿ ನಗರದಲ್ಲಿ ಶ್ರೀ ಅಭಿನಂದನ್ ಸ್ಪೂರ್ತಿ ಧಾಮ ಅನಾಥ ವಿಕಲಚೇತನ ಹಾಗೂ ಬಡ ಮಕ್ಕಳ ಆಶ್ರಮದಲ್ಲಿ ಉಚಿತ ನೋಟ್ ಬುಕ್ ಹಾಗೂ ಆಹಾರ ಕಿಟ್ಟು ಹಣ್ಣು. ಮಕ್ಕಳಿಗೆ ವಿಸ್ತರಿಸಲಾಯಿತು.

ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ತಳಿಗೆ ಮಾಲಾರ್ಪಣೆ ಮಾಡಿ ಮಹಿಳೆಯರಿಗೂ ಸಾರ್ವಜನಿಕರಿಗೂ ಸಿಹಿ ತಿನ್ನಿಸಿ ಸಂಭ್ರಮ ಆಚರಣೆ ಮಾಡಲಾಯಿತು .

ಈ ಸಂದರ್ಭದಲ್ಲಿ , ಮಳ್ಳಪ್ಪ ಪೂಜಾರಿ ಕರಿಯಪ್ಪ ಬೆಂಗಳೂರು, ಮಲ್ಲನಗೌಡ ಸುಂಕನೂರ್ ಹನುಮೇಶ್ ಬಾಗೋಡಿ ಮಾಳಿಂಗರಾಯ ಕಡುಬೂರ್ ಹಾಗೂ ಕರಿಯಪ್ಪ ಮಾಜಿ ತಾಲೂಕು ಪಂಚಾಯಿತಿ ಸದಸ್ಯರು ನಾಗಭೂಷಣ್ ಮಸ್ಕಿ ಮಲ್ಲಯ್ಯ ಹಾಲ್ದಾರ್ ಬಸವರಾಜ್ ಕಡುಬೂರ್ ಮಲ್ಲಪ್ಪ ಬಾರ್ಕೆರ್ ಮಾನಯ್ಯ ಅಂಕಸದೊಡ್ಡಿ ಗುಡುದಪ್ಪ ಕಡಬೂರು ಅಯ್ಯಾಳಿ ಕ್ಯಾತ್ನಟ್ಟಿ ದುರ್ಗೇಶ್ ಹೂವಿನಬಾವಿ ಲಕ್ಷ್ಮಿಪತಿ ದೊಣ್ಣಮರಡಿ ಮಲ್ಲಯ್ಯ ನೀಲಗಲ್ ಬಸವರಾಜ್ ಹಿಟ್ನಾಳ್ ದುರ್ಗಪ್ಪ ಬಸಾಪುರ್ ಗದ್ಯಪ್ಪ ಸಂತೆಕಲ್ಲೂರ್ ಬಸವರಾಜ್ ಗೂಗ್ಲಿ ನರಸಪ್ಪ ವಂದಲಿ ಮೇರೆಪ್ಪ ಕಡುಬುರ್ ಬಸವರಾಜ್ ತೆಗ್ಗಿಹಾಳ ಅಂಬರೀಶ್ ತಿಪ್ಪಣ್ಣ ಪಾಟೀಲ್ ದೊಣ್ಣೆಮರಡಿ ಹಳ್ಳಿ ಇತರೆ ಇದ್ದರೂ

# ದೀರ್ಘಾವಧಿ ಮುಖ್ಯಮಂತ್ರಿ ಸಿದ್ದರಾಮಯ್ಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀರ್ಘಾವಧಿ ಮುಖ್ಯಮಂತ್ರಿಯಾಗಿ ನಾಡಿಗೆ ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ಅವರ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರೆಡ್ಡಿ ಪತ್ರ ಬರೆದು, ಕರ್ನಾಟಕದ ಸಾಮಾಜಿಕ ನ್ಯಾಯ ಹಾಗೂ ಜನಪರ ಸರ್ವಾಂಗೀಣ ಅಭಿವೃದ್ಧಿ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸುತ್ತಿರುವ ದೂರದೃಷ್ಟಿಯ ನಾಯಕತ್ವಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಬಸವರಾಜ ರಾಯರೆಡ್ಡಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಬರೆದ ಪತ್ರದ ಸಾರಾಂಶ ಇಂತಿದೆ.

ಕರ್ನಾಟಕದ ರಾಜಕೀಯ ಇತಿಹಾಸವು ಜನಪರ ಆಡಳಿತ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಾತ್ಮಕ ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸಿದ ಮಹಾನ್ ನಾಯಕರ ದಿಟ್ಟ ಹೋರಾಟಗಳಿಂದ ರೂಪುಗೊಂಡ ಸುವರ್ಣ ಪರಂಪರೆ ಹೊಂದಿದೆ. ಶೋಷಿತರು, ಹಿಂದುಳಿದವರು ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಪರವಾಗಿ ಧೈರ್ಯವಾಗಿ ನಿಂತ ನಾಯಕರಿಂದಲೇ ಈ ನಾಡಿನ ಪ್ರಗತಿಪರ ರಾಜಕೀಯ ಸಂಸ್ಕೃತಿ ಬೆಳೆದಿದೆ.

ಆ ಪರಂಪರೆಯಲ್ಲಿ ಅಚ್ಚಳಿಯದ ಗುರುತು ಮೂಡಿಸಿದ ಮಹಾನ್ ನಾಯಕರಲ್ಲಿ ದಿವಂಗತ ದೇವರಾಜ ಅರಸು ಅವರು ಅಗ್ರ ಗಣ್ಯರು. ಅವರು 20–03–1972 ರಿಂದ 31–12–1977 ರವರೆಗೆ ಹಾಗೂ 28–02–1978 ರಿಂದ 07–01–1980 ರವರೆಗೆ ಒಟ್ಟಾರೆ 2,792 ದಿನಗಳ ಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ, ಭೂ ಸುಧಾರಣೆ, ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಉನ್ನತಿ ಮತ್ತು ಶೋಷಿತರ ಸಬಲೀಕರಣದ ಮೂಲಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಅಮರ ಅಧ್ಯಾಯವೊಂದನ್ನು ರಚಿಸಿದರು. ಅದಲ್ಲದೆ ಕರ್ನಾಟಕ ರಾಜ್ಯವನ್ನು ಪ್ರಗತಿಪರ ಚಿಂತನೆಯತ್ತ ತರುವುದರಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ರಾಮಕೃಷ್ಣ ಹೆಗಡೆ ಇವರುಗಳ ವಿಶಾಲ ದೃಷ್ಟಿಕೋನದ ವಿಚಾರಗಳು ಹಾಗೂ ಪ್ರಾಮಾಣಿಕ ಚಿಂತನೆಗಳು ನಮ್ಮ ಮುಂದೆ ಇಂದಿಗೂ ಜೀವಂತ ಇರುತ್ತವೆ. ಅದೇ ಸಾಮಾಜಿಕ ನ್ಯಾಯ ತಾತ್ವಿಕ ಮತ್ತು ರಾಜಕೀಯ ಪರಂಪರೆ ಮತ್ತು ಸರ್ವಾಂಗೀಣ ಅಭಿವೃದ್ಧಿ ಚಿಂತನೆಗಳನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಮುಂದುವರೆಸಿಕೊಂಡು, ಕರ್ನಾಟಕದ ಇತಿಹಾಸಕ್ಕೆ ಹೊಸ ಮೈಲಿಗಲ್ಲು ಸ್ಥಾಪಿಸಿ ನೀವು 13–05–2013 ರಿಂದ 15–05–2018 ರವರೆಗೆ ಹಾಗೂ 20–05–2023 ರಿಂದ 06–01–2026 ರವರೆಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು, ಸುದೀರ್ಘ ಮತ್ತು ಸಾರ್ಥಕ ಆಡಳಿತದ ಮೂಲಕ ಚಾರಿತ್ರಿಕ ದಾಖಲೆ ನಿರ್ಮಿಸುತ್ತಿರುವುದು ರಾಜ್ಯದ ಜನತೆಗೆ ಅಪಾರ ಹೆಮ್ಮೆಯ ವಿಷಯವಾಗಿದೆ. ಹಾಗೂ ಮುಂದಿನ ಎರಡುವರೆ ವರ್ಷಗಳ ಕಾಲ ಅಂದರೆ 28 ಮೇ 2028 ರವರೆಗೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರಿ ಎಂದು ನನ್ನ ನಂಬಿಕೆಯಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕರುನಾಡಿನಲ್ಲಿ ನೆಮ್ಮದಿಯ ಗ್ಯಾರಂಟಿ

## ಸ್ವಾಭಿಮಾನಿ ಮಹಿಳೆಯರ ಸ್ವಾವಲಂಬಿ ಬದುಕಿಗೆ ಶಕ್ತಿ





- ಗೃಹಲಕ್ಷ್ಮಿ ಯೋಜನೆಯ ಮೂಲಕ 1.22 ಕೋಟಿ ಕುಟುಂಬಗಳ ಯಜಮಾನಿಯರ ಖಾತೆಗೆ **ಪ್ರತಿ ತಿಂಗಳು ₹. 2,000** ಜಮೆ
- ಶಕ್ತಿ ಯೋಜನೆಯ ಮೂಲಕ ರಾಜ್ಯದ ಎಲ್ಲಾ ಮಹಿಳೆಯರಿಗೆ ಸಾರಿಗೆ ಬಸ್‌ಗಳಲ್ಲಿ **ಉಚಿತ ಪ್ರಯಾಣ**
- ಮಹಿಳೆಯರು ಮತ್ತು ಮಕ್ಕಳ ನೆರವಿಗಾಗಿ **ಅಕ್ಕ ಪಡೆ** ಸ್ಥಾಪನೆ
- ಮಹಿಳಾ ಉದ್ಯೋಗಿಗಳಿಗೆ ಪ್ರತಿ ತಿಂಗಳು ಒಂದು ದಿನದ **ವೇತನಸಹಿತ ಮುಟ್ಟಿನ ರಜೆ**
- ಮಹಿಳಾ ಸ್ವಸಹಾಯ ಗುಂಪುಗಳಿಗೆ ಬಲ ತುಂಬಲು ರಾಜ್ಯಾದ್ಯಂತ **ಅಕ್ಕ ಕೆಫೆಗಳ** ಸ್ಥಾಪನೆ
- ಮಹಿಳಾ ಉದ್ದೇಶಿತ ಕಾರ್ಯಕ್ರಮಗಳಿಗೆ 2025-26ನೇ ಸಾಲಿನಲ್ಲಿ **₹. 94,084 ಕೋಟಿ** ಮೀಸಲು
- ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟಲು 14 ವರ್ಷದ ಹೆಣ್ಣು ಮಕ್ಕಳಿಗೆ **HPV ಲಸಿಕೆ**
- ರಾಜ್ಯದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ಹಾಗೂ ಮಹಿಳಾ ಸಿಬ್ಬಂದಿಗಳಿಗೆ ರಕ್ಷಣೆ ನೀಡುವ ಉದ್ದೇಶದಿಂದ **ರಕ್ಷಾ ಕೋಟೆ** ನಿರ್ಮಾಣ
- ಸೆಪ್ಟೆಂಬರ್ 13 ಅನ್ನು **ಮಹಿಳಾ ನೌಕರರ ದಿನ**ವಾಗಿ ಘೋಷಿಸಲು ನಿರ್ಧಾರ
- ಗರ್ಭಿಣಿಯರಲ್ಲಿ ರಕ್ತಹೀನತೆ ತಡೆಗಟ್ಟಲು ಹಿಂದುಳಿದ ಜಿಲ್ಲೆಗಳಲ್ಲಿ ಪೌಷ್ಟಿಕಾಂಶ ಕಿಟ್‌ಗಳು, ಪ್ರೋತ್ಸಾಹ ಧನ ಹಾಗೂ ತಾಯಂದಿರಿಗೆ ವಾತ್ಸಲ್ಯ ಕಿಟ್‌ಗಳ ವಿತರಣೆ
- ನರೇಗಾ ಮಹಿಳಾ ಕಾರ್ಮಿಕರ ಮಕ್ಕಳ ಆರೈಕೆಗಾಗಿ ಕೂಸಿನ ಮನೆಗಳ ಸ್ಥಾಪನೆ
- ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರಿ ಸಂಘಗಳ ಆರಂಭ
- ಶುಚಿ ಯೋಜನೆಯಡಿ 10 ರಿಂದ 18 ವರ್ಷ ವಯಸ್ಸಿನ ಹೆಣ್ಣು ಮಕ್ಕಳಿಗೆ **ಸ್ಯಾನಿಟರಿ ಪ್ಯಾಡ್** ವಿತರಣೆ
- ಸಾರ್ವಜನಿಕವಾಗಿ ಮಹಿಳೆಯರಿಗೆ ಭದ್ರತೆಯ ವಿಶ್ವಾಸವನ್ನು ಮೂಡಿಸುವ ಜೊತೆಗೆ ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ಕೂಡಲೇ ಪೊಲೀಸ್ ನೆರವನ್ನು ಒದಗಿಸುವ ಉದ್ದೇಶದಿಂದ ಬೆಂಗಳೂರು ನಗರದಾದ್ಯಂತ ಒಟ್ಟು **60 ಮಹಿಳಾ ಔಟ್ ಪೋಸ್ಟ್‌ಗಳ** ಸ್ಥಾಪನೆ

## ಕರ್ನಾಟಕ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ...

**ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ